ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2017

॥ ಧಿಯೋ ಯೋನಃ ಪ್ರಚೋದಯಾತ್ ॥


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-17 ಸಂಚಿಕೆ-7 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಕರಾವಳಿ ಜಿಲ್ಲೆಗಳಿಗೆ ಜಗದ್ಗುರುಗಳ ಭೇಟಿ

ಕರಾವಳಿ ಜಿಲ್ಲೆಗಳಾದ ಕಾಸರಗೋಡು ಹಾಗೂ ಉಡುಪಿ ಜಿಲ್ಲೆಗಳ ಭಕ್ತಾದಿಗಳ ಅಪೇಕ್ಷೆಯಂತೆ ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಹಾಗೂ ತತ್ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳವರು ತಾ 29–06–2017 ಹಾಗೂ 30–06–2017ರಂದು ಕಾಸರಗೋಡು ಹಾಗೂ ಮೂಡಬಿದ್ರೆಗೆ ಭೇಟಿಯಿತ್ತು ಶಿಷ್ಯವರ್ಗದವರನ್ನು ಅನುಗ್ರಹಿಸಿದರು.

ತಾ.29–06–2017ರಂದು ಕಾಸರಗೋಡಿನ ಚಿರುಗೋಳಿ ಶ್ರೀ ಸೋಮನಾಥ ದೇವಸ್ಥಾನಕ್ಕೆ ಭೇಟಿ ನೀಡಿ ಒಂದು ಹೊಸ ದೇವಸ್ಥಾನವನ್ನು ಕಟ್ಟುವುದಕ್ಕಿಂತ ಹಳೆಯ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವುದು ತುಂಬಾ ಪುಣ್ಯದ ಕೆಲಸ. ಹಾಗೆಯೇ ಯಾವುದೇ ಕೆಲಸವನ್ನು ಮಾಡುವಾಗ ದೇವರ ಹಾಗೂ ಗುರುಗಳ ಆಶೀರ್ವಾದ ಅಗತ್ಯ. ಅಂತೆಯೇ



ನೀವು ಈ ದೇವಸ್ಥಾನದ ಜೀರ್ಣೋದ್ಧಾರ ಸಂದರ್ಭದಲ್ಲಿ ನಮ್ಮ ಆಶೀರ್ವಾದವನ್ನು ಪಡೆದೇ ಈ ಕೆಲಸವನ್ನು ಮಾಡಿದ್ದೀರಿ. ಇದು ನಮಗೆ ಅತೀವ ಸಂತೋಷವನ್ನು ಉಂಟುಮಾಡಿದೆ. ಆದುದರಿಂದ ನಮ್ಮ ಪ್ರೀತಿಯ ಶಿಷ್ಯರಾದ ನೀವುಗಳು ನಮಗೆ ಇಲ್ಲಿಗೆ ಬರಬೇಕೆಂದು ಕೇಳಿಕೊಂಡಾಗ ನಿಮ್ಮ ಬೇಡಿಕೆಯನ್ನು ಒಪ್ಪಿಕೊಳ್ಳಲೇಬೇಕಾಯಿತು ಎಂದು ಅವರು ನುಡಿದರು. ಒಳ್ಳೆಯ ಕೆಲಸಗಳನ್ನು ಮಾಡುವಾಗ ವಿಘ್ನಗಳು ಬರುವುದು ಸಹಜ ಅದು ದೇವರು ಕೊಡುವ ಪರೀಕ್ಷೆ. ಆಗ ನಾವು ಪುನಃ ಪುನಃ ಪ್ರಯತ್ನಗಳನ್ನು ಮಾಡುತ್ತಾ ದೇವರ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು ಎಂದು ಆಶೀರ್ವಚನವಿತ್ತರು. ದೇವಸ್ಥಾನದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಡಾ। ಶೋಭಾ ರಮೇಶ ರಾವ್, ಶ್ರೀಮತಿ ಪಾರ್ವತಿ ಗೋಪಾಲಕೃಷ್ಣ ಉಬರಳೆ, ಶ್ರೀಮತಿ ವಿಜಯಲಕ್ಷ್ಮಿ ಬಾಲಚಂದ್ರರಾವ್, ಶ್ರೀಮತಿ ಸರಸ್ವತಿ ಶಿವರಾವ್ ಅಜ್ಜಾವರ ಇವರು ಆರತಿ ಬೆಳಗಿ ಯತಿದ್ವಯರನ್ನು ಸ್ವಾಗತಿಸಿದರು. ಶ್ರೀಯುತ ಕರುಣ್ ರಾವ್ ಬೆಳ್ಳೆ, ದೇವಳದ ಗೌರವಾಧ್ಯಕ್ಷರಾದ ಡಾ। ಚೆಂಡುಕಳ ರಮೇಶ ರಾವ್, ಅಧ್ಯಕ್ಷ ಶ್ರೀ ದಾಮೋದರ ಉಬರಳೆ, ಕಾರ್ಯದರ್ಶಿ ಸುಬ್ರಹ್ಮಣ್ಯ ಉಬರಳೆ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

(3ನೇ ಪುಟಕ್ಕೆ...)

## ಬೆಳ್ತಂಗಡಿಯಲ್ಲಿ ವಾರ್ಷಿಕೋತ್ಸವ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿಯ ಇಪ್ಪತ್ತನೆಯ ವಾರ್ಷಿಕೋತ್ಸವವು ಲ್ಯಾಲ ಬೆಳ್ತಂಗಡಿಯ ಸುಬ್ರಹ್ಮಣ್ಯನಗರದ ಸುಬ್ರಹ್ಮಣ್ಯ ಸಭಾಭವನದಲ್ಲಿ ತಾ.11–6–2017ರ ರವಿವಾರ ನೆರವೇರಿತು. ಸಭಾದ ಅಧ್ಯಕ್ಷರಾದ ಶ್ರೀ ಬಿ.ಕೆ.ಧನಂಜಯ ಕುಮಾರ್‌ರವರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿ ಅತಿಥಿಗಳನ್ನು ಹಾಗೂ ಸಭಿಕರನ್ನು ಸ್ವಾಗತಿಸಿದರು. ಉಡುಪಿಯಿಂದ ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಡಾ। ವೈ. ಸುದರ್ಶನ ರಾವ್ ಇವರು ಹಾಗೂ ಉಜಿರೆಯ ಶ್ರೀ ಜನಾರ್ಧನ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಸ್. ಗಂಗಾಧರ್ ರಾವ್ ಕೆವುಡೇಲು ಇವರು ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯದರ್ಶಿ ಶ್ರೀ ಎಂ.ಎಸ್.ದಿನೇಶ ಕುಮಾರ್, ಉಪಾಧ್ಯಕ್ಷ ಶ್ರೀ ರಘುಚಂದ್ರ ರಾವ್, ಕಟ್ಟಡ ಸಮಿತಿಯ ಅಧ್ಯಕ್ಷ ಶ್ರೀ ಎಂ.ಎಸ್.ಅರುಣ್ ಕುಮಾರ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ರೇಖಾ ಸುಧೀರ್ ರಾವ್, ಕಾರ್ಯದರ್ಶಿ ಶ್ರೀಮತಿ ರಾಜಶ್ರೀ ಧನಂಜಯ ರಾವ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ನಿತಿನ್ ರಾವ್ ಹಾಗೂ ಕಾರ್ಯದರ್ಶಿ ಶ್ರೀ ಹರೀಶ ರಾವ್ ವೇದಿಕೆಯಲ್ಲಿದ್ದರು. ರಾಷ್ಟ್ರಪತಿಗಳಿಂದ ಸೃಷ್ಟಿ ಸಮ್ಮಾನ ಪ್ರಶಸ್ತಿ ಪುರಸ್ಕೃತ ಹಿರಿಯ ಕೃಷಿಕ ಶ್ರೀ ಬಿ.ಕೆ. ದೇವರಾವ್ ಇವರನ್ನು ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಕ್ರೀಡಾ ಸ್ಪರ್ಧೆಗಳ ಬಹುಮಾನಗಳನ್ನು ವಿತರಿಸಲಾಯಿತು. ಡಾ। ವೈ.ಸುದರ್ಶನ ರಾವ್‌ರವರು ಸಮಾಜಬಾಂಧವರ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಸಂಘಗಳು ತಮ್ಮ ಕಾರ್ಯಶೈಲಿಯನ್ನು ಯಾವ ರೀತಿ ಬದಲಾಯಿಸಬೇಕೆನ್ನುವ ಬಗ್ಗೆ ವಿವರಿಸಿದರು. ಈ ನಿಟ್ಟಿನಲ್ಲಿ ತಾನು ಸಂಚಾಲಕನಾಗಿರುವ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್‌ನ ಮುಖಾಂತರ ಅಂತರ್ಜಾಲದಲ್ಲಿ ಪ್ರಸ್ತುತಪಡಿಸಿರುವ ಮೊಬೈಲ್ ಆಪ್ "ಸ್ಥಾನಿಕ"ದ ಬಗ್ಗೆ ಹಾಗೂ ಅದರ ಉಪಯೋಗಗಳ ಬಗ್ಗೆ ವಿವರಿಸಿದರು. ಶ್ರೀ ರಘುನಾಥರಾವ್ ಧನ್ಯವಾದವಿತ್ತರು. ಭೋಜನದ ನಂತರ ಬಲೆತೆಲಿಪಾಲೆ ತಂಡದವರಿಂದ ಹಾಸ್ಯ ಪ್ರಹಸನವಿತ್ತು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

### ಪ್ರಕಟಣೆ

ಆತ್ಮೀಯ ಸಮಾಜ ಬಾಂಧವರೇ,

ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

**ನಾಗರಪಂಚಮಿ**
ತಾ.27-07-2017ನೇ ಗುರುವಾರ
ಸಮಯ : ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00ರ ತನಕ

**ವರಮಹಾಲಕ್ಷ್ಮೀ ವ್ರತ**
ತಾ.04-08-2017ನೇ ಶುಕ್ರವಾರ
ಸಂಜೆ 5-00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

**ಹೂವಿನ ಪೂಜೆ**
(ಮಹಿಳಾ ವೇದಿಕೆಯ ವತಿಯಿಂದ)
ತಾ.01-09-2017ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

**ಶೃಂಗೇರಿಯಲ್ಲಿ ಗುರುಗಳ ಭೇಟಿ**
ತಾ.20-08-2017ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-00 ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿಗಳು (9036443884), ಮೆನೇಜರ್ (9448108920, 0820-2520754) ಅಥವಾ ವಸಂತರಾವ್ ಕರಂಬಳ್ಳಿ (9632291183) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.
ಅಂದಾಜು ಖರ್ಚು ರೂ.350/-

**ಋಗುಪಾಕರ್ಮ**
ತಾ.04-09-2017ನೇ ಸೋಮವಾರ
ಸಮಯ : ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

| ಶ್ರೀ ಕೆ. ಸುರೇಶ್ ರಾವ್ | ಶ್ರೀ ಐ.ಕೆ. ಜಯಚಂದ್ರ | ಶ್ರೀ ವೈ. ಭುವನೇಂದ್ರ ರಾವ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ (ಪ್ರಭಾರ) | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಬ್ರಾಹ್ಮಣರು ಈ ದೇಶದ ಇತಿಹಾಸದುದ್ದಕ್ಕೂ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದರೆ ಅದಕ್ಕೆ ಅವರ ಬುದ್ಧಿಶಕ್ತಿ, ಶ್ರಮದ ದುಡಿಮೆ , ಪ್ರಾಮಾಣಿಕ ಹಾಗೂ ಸರಳ ಜೀವನವೇ ಕಾರಣ. ಈ ದೇಶದ ಬೆಳವಣಿಗೆಗೆ ಇತಿಹಾಸ ಪ್ರಸಿದ್ಧ ಚಾಣಕ್ಯನಿಂದ ಹಿಡಿದು ಇಂದಿನ ತನಕ ಲಕ್ಷಾಂತರ ಬ್ರಾಹ್ಮಣರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಕೇವಲ ದೇಶದ ಭೌತಿಕ ಬೆಳವಣಿಗೆಗೆ ಮಾತ್ರವಲ್ಲ ಆಹಾರ , ನಡೆನುಡಿ, ಭಾಷೆ, ಕಲೆ, ಸಾಹಿತ್ಯ, ಶಾಸ್ತ್ರಗಳನ್ನು ಬೆಳೆಸಿ ಉಳಿಸಿಕೊಂಡು ಬಂದು ಈ ದೇಶದ ಸಂಸ್ಕೃತಿಯನ್ನು ರೂಪಿಸಿದ್ದು ಬ್ರಾಹ್ಮಣರೇ ಎಂದರೆ ತಪ್ಪಾಗಲಾರದು. ಬ್ರಾಹ್ಮಣರು ಹೊಂದಿದ್ದ ಬೌದ್ಧಿಕ ಔನ್ನತ್ಯದಿಂದ ಇತರರು ತಾವಾಗಿಯೇ ಅವರಿಗೆ ಉನ್ನತ ಸ್ಥಾನಗಳನ್ನು ಹಾಗೂ ಕೆಲಸಗಳನ್ನು ವಹಿಸಿ ಕೊಟ್ಟು ಅವರ ಸೇವೆಯ ಮಹತ್ವವನ್ನು ಗುರುತಿಸಿ ಗೌರವಿಸಿದರೇ ಹೊರತು ಬ್ರಾಹ್ಮಣರು ಎಂದೂ ತನ್ನ ಉನ್ನತಿಗಾಗಿ ಇತರರೊಂದಿಗೆ ಸ್ಪರ್ಧೆಗೆ ಇಳಿದವರಲ್ಲ . ಆದರೆ ಸಾವಿರಾರು ವರ್ಷಗಳ ಹಿಂದೆ ಯಾವುದೋ ಕಾರಣಕ್ಕೆ ರೂಪಿಸಿದ್ದ ಕಟ್ಟುಕಟ್ಟಲೆಗಳು ಮಾನವೀಯ ಸ್ಪರ್ಶ ಕಳೆದುಕೊಂಡಂತೆ ಹಾಗೂ ಬ್ರಾಹ್ಮಣೇತರರಲ್ಲಿ ತಮಗೂ ಬ್ರಾಹ್ಮಣರು ಅನುಭವಿಸುತ್ತಿರುವ ಸಾಮಾಜಿಕ ಸ್ಥಾನಮಾನ ಬೇಕು ಎಂಬ ತುಡಿತವುಂಟಾದುದರ ಫಲವಾಗಿ ಹಾಗೂ ಆ ಸಾಮಾಜಿಕ ಸ್ಥಾನಮಾನ ಉಪಲಬ್ಧವಾಗಬೇಕಾದ ದಾರಿ ತಿಳಿಯದೇ ಇರುವ ಪರಿಣಾಮವಾಗಿ ಬ್ರಾಹ್ಮಣರು ತಮ್ಮನ್ನು ಶೋಷಿಸುತ್ತಿದ್ದಾರೆ ಎಂಬ ಭಾವನೆ ಬ್ರಾಹ್ಮಣೇತರರಲ್ಲಿ ಮೂಡಿತು. ಈ ಭಾವನೆಯನ್ನು ಕೆಲವು ಅವಕಾಶವಾದಿಗಳು ಅವರಲ್ಲಿ ಮೂಡಿಸಿದ್ದೂ ಇರಬಹುದು. ಆದರೆ ನಿಜವಾಗಿಯಾದರೆ ಬ್ರಾಹ್ಮಣರು ಯಾವುದೇ ಕ್ಷೇತ್ರದಲ್ಲಿಯಾಗಲಿ ಅನಾಯಾಸವಾಗಿ ಸಾಧನೆಗೈದು ಉನ್ನತ ಸ್ಥಾನಕ್ಕೇರುತ್ತಿರುವುದು ಶತ ಶತಮಾನಗಳಿಂದ ನಾವು ಅನುಸರಿಸುತ್ತಿರುವ ಜೀವನಶೈಲಿಯ ಪರಿಣಾಮವು ನಮ್ಮ ವಂಶವಾಹಿ (ಜೀನ್)ಗಳಲ್ಲಿ ಹೊಕ್ಕಿರುವುದರಿಂದಲೇ ಹೊರತು ಇತರರ ಶೋಷಣೆಯಿಂದಲ್ಲ. ದುರದೃಷ್ಟವಶಾತ್ ಈಗ ಅನೇಕ ಕಡೆ ಬ್ರಾಹ್ಮಣ ವಿರೋಧಿ ಚಟುವಟಿಕೆಗಳನ್ನು ನಾವು ಕಾಣುತ್ತಿದ್ದೇವೆ. ಬ್ರಾಹ್ಮಣರನ್ನು ವಿರೋಧಿಸ ಬೇಕೆಂಬ ಹುಚ್ಚಿನಲ್ಲಿ ಕೆಲವರು ಈ ದೇಶದ ಸಂಸ್ಕೃತಿಗೆ ವಿರುದ್ಧವಾದ ಕೆಲಸಗಳನ್ನು ಪ್ರಚಾರಮಾಡುವುದನ್ನೂ ಕಾಣುತ್ತಿದ್ದೇವೆ. ಇತರರಿಗೆ ಮುಂದು ಬರಲು ಸಹಾಯ, ಸಲಹೆ ನೀಡಿ ಅವರನ್ನು ಮುಂದೆ ತರುವುದನ್ನು ಬಿಟ್ಟು ಬ್ರಾಹ್ಮಣರನ್ನು ತುಳಿದು ಎಲ್ಲರನ್ನೂ ಸರಿಸಮಾನರನ್ನಾಗಿಸುವ ಕೆಲಸ ಸರಕಾರದಿಂದಲೂ ನಡೆಯುತ್ತಿರುವುದು ಸರಿಯಲ್ಲ. ಇದು ದೇಶದ ಮೇಲೆ ಮುಂದೊಂದು ದಿನ ಕೆಟ್ಟ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ . ಬ್ರಾಹ್ಮಣ ಸಮಾಜದ ಪ್ರತಿಭಾನ್ವಿತ ಯುವಜನಾಂಗವು ದೊಡ್ಡ ಸಂಖ್ಯೆಯಲ್ಲಿ ಪಾಶ್ಚಾತ್ಯದೇಶಗಳಿಗೆ ವಲಸೆ ಹೋಗುತ್ತಿರುವುದೇ ಇದರ ಸೂಚನೆ. ಈ ಹಿನ್ನೆಲೆಯಲ್ಲಿ ವಿಪ್ರರೆಲ್ಲರೂ ಒಂದಾಗಿ ಒಗ್ಗಟ್ಟಾಗಿದ್ದು ವಿಪ್ರರೆಲ್ಲರ ಒಳಿತಿಗಾಗಿ ಶ್ರಮಿಸುವುದು ಇಂದಿನ ಅಗತ್ಯವಾಗಿದೆ. ಅಂತೆಯೇ ದೇಶದಾದ್ಯಂತ ವಿಪ್ರರೆಲ್ಲರೂ ತಮ್ಮ ಸೈದ್ಧಾಂತಿಕ ಭೇದಭಾವಗಳನ್ನು ಬದಿಗಿತ್ತು ಒಂದಾಗುತ್ತಿರುವುದು ಸ್ವಾಗತಾರ್ಹ.

ಆದಿಶಂಕರಾಚಾರ್ಯರು ಈ ಭುವಿಯಲ್ಲಿ ಅವತರಿಸಿದಾಗಲೂ ವೈದಿಕ ಧರ್ಮ ಇದೇ ರೀತಿ ಅಪಾಯದಲ್ಲಿತ್ತು. ವೈದಿಕರು ಶೈವ , ವೈಷ್ಣವ, ದೇವೀ ಉಪಾಸಕ, ಶಾಕ್ತ, ಕಾಪಾಲಿಕ ಇತ್ಯಾದಿ ವಿವಿಧ ಪಂಥಗಳಾಗಿ ವಿಭಜನೆ ಹೊಂದಿದ್ದರು. ಪಂಥ ಪಂಥಗಳಲ್ಲಿ ಸೈದ್ಧಾಂತಿಕ ಭೇದಭಾವ ಇದ್ದುದು ಮಾತ್ರವಲ್ಲ ಒಬ್ಬರು ಇನ್ನೊಬ್ಬರನ್ನು ದ್ವೇಷಿಸುತ್ತಿದ್ದರು ಅದಕ್ಕಾಗಿ ಯುದ್ಧಗಳಾಗುತ್ತಿದ್ದವು, ಕೊಲೆಗಳಾಗುತ್ತಿದ್ದವು. ಅನೇಕ ವೈದಿಕರು ವೇದ ಶಾಸ್ತ್ರಗಳನ್ನು ತಮ್ಮದೇ ರೀತಿಯಲ್ಲಿ ಅರ್ಥೈಸಿಕೊಂಡು ಅವೈದಿಕ ಕ್ರಮಗಳನ್ನು ಅನುಸರಿಸುತ್ತಿದ್ದರು. ನರಬಲಿ ಪ್ರಾಣಬಲಿಯಂತಹಾ ಕ್ರೂರ ಆಚರಣೆಗಳೂ ಆಗ ಸಾಮಾನ್ಯವಾಗಿದ್ದವು ವೈದಿಕ ಮತದಲ್ಲಿನ ವೈರುಧ್ಯಗಳಿಂದ ಬ್ರಾಹ್ಮಣರು ಮಾತ್ರವಲ್ಲ ಬ್ರಾಹ್ಮಣೇತರರೂ ರೋಸಿ ಹೋಗಿದ್ದರು. ಹಾಗಾಗಿ ಆಗ ರಾಜಾಶ್ರಯ ಪಡೆದಿದ್ದ ಬೌದ್ಧ ಪಂಥದತ್ತ ಜನ ವಾಲತೊಡಗಿದ್ದರು. ಈ ಸಂದರ್ಭದಲ್ಲಿ ಅವತರಿಸಿದ ಶ್ರೀ ಶಂಕರರು ದೇವದೇವತೆಗಳ ಹೆಸರಿನಲ್ಲಿ ವಿಭಜನೆಯಾಗಿದ್ದ ಬ್ರಾಹ್ಮಣರನ್ನು ಪಂಚಾಯತನ ಪೂಜಾ ಪದ್ಧತಿಯನ್ನು ಜಾರಿಗೆ ತಂದು ಒಂದುಗೂಡಿಸಿದರು. ಪಂಚಾಯತನ ಪೂಜಾಪದ್ಧತಿಯು ಆಗ ಪ್ರಮುಖವಾಗಿ ಪ್ರಚಲಿತವಿದ್ದ ಶಿವ, ವಿಷ್ಣು ,ದುರ್ಗೆ,ಸೂರ್ಯ ಹಾಗೂ ಗಣಪತಿಯನ್ನು ಒಂದಾಗಿ ಸಮಾನವಾಗಿ ಭಾವಿಸಿ ಪೂಜಿಸುವ ಕ್ರಮ. ಹೀಗೆ ಶ್ರೀ ಶಂಕರರು ವೈದಿಕರೊಳಗಿದ್ದ ಭೇದ ಹಾಗೂ ದ್ವೇಷವನ್ನು ತೊಲಗಿಸಿ ವಿಪ್ರರನ್ನು ಈ ದೇಶದಲ್ಲಿ ಪ್ರಪ್ರಥಮವಾಗಿ ಒಂದುಗೂಡಿಸಿದ ಮಹಾನುಭಾವರು. ವಿಪ್ರರನ್ನು ಒಂದುಗೂಡಿಸುವ ಮೂಲಕ ಅವರು ಸನಾತನ ಸಂಸ್ಕೃತಿಯ ರಕ್ಷಣೆಗೆ ಕಾರಣೀಭೂತರಾದರು. ಅವರು ಕಾಲವಾಗಿ ಹನ್ನೆರಡು ಶತಮಾನಗಳು ಕಳೆದ ನಂತರವೂ ಈ ದೇಶದಲ್ಲಿ ಸನಾತನ ಸಂಸ್ಕೃತಿಯ ಬೇರುಗಳು ಇನ್ನೂ ಭದ್ರವಾಗಿರುವುದು ಶ್ರೀ ಶಂಕರಾಚಾರ್ಯರ ಈ ಅಮೋಘ ಕೆಲಸದಿಂದಲೇ.

ಸ್ಥಾನಿಕ ಬ್ರಾಹ್ಮಣರು ಶ್ರೀ ಶಂಕರಾಚಾರ್ಯ ಪ್ರತಿಷ್ಠಾಪಿತ ಶ್ರೀ ಶೃಂಗೇರಿ ಸಂಸ್ಥಾನದ ಪರಂಪರಾತ ಶಿಷ್ಯರೆನಿಸಿಕೊಳ್ಳಲು ಹೆಮ್ಮೆಯೆನಿಸುವುದಿಲ್ಲವೇ?, ಬನ್ನಿ, ಈ ಗುರುಶಿಷ್ಯ ಬಾಂಧವ್ಯವನ್ನು ಉಳಿಸಿಕೊಳ್ಳೋಣ. ತಾ.20–08–2017ರಂದು ಸಮಸ್ತ ಸ್ಥಾನಿಕ ಬಾಂಧವರು ಶೃಂಗೇರಿಗೆ ಭೇಟಿಯಿತ್ತು ಚಾತುರ್ಮಾಸ ವ್ರತ ನಿರತ ಶೃಂಗೇರಿಯ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯುವ ದಿನ. ಅಂದು ಪ್ರಪಂಚದ ಮೂಲೆ ಮೂಲೆಗಳಿಂದ ಸ್ಥಾನಿಕ ಬಾಂಧವರು ಗುರುಗಳ ಭೇಟಿಗಾಗಿ ಆಗಮಿಸುತ್ತಾರೆ. ನೆನಪಿಡಿ, ತಾ.20–08–2017, ಅಂದು ನೀವೂ ಶೃಂಗೇರಿಗೆ ಬನ್ನಿ, ವಿಪ್ರರೆಲ್ಲರನ್ನು ಪ್ರಪ್ರಥಮವಾಗಿ ಒಂದುಗೂಡಿಸಿ ಉಳಿಸಿದ ಈ ಕ್ಷೇತ್ರಕ್ಕೆ ಗೌರವ ಸಲ್ಲಿಸಿ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ










## ಕರಾವಳಿ ಜಿಲ್ಲೆಗಳಿಗೆ ಜಗದ್ಗುರುಗಳ ಭೇಟಿ

...1ನೇ ಪುಟದಿಂದ

ಸಂಜೆ ಶ್ರೀ ಶ್ರೀಗಳು ಮರುದಿನ ಶ್ರೀ ದೇವಳದಲ್ಲಿ ನಡೆಯಲಿದ್ದ ದೃಢಕಲಶಾಭಿಷೇಕ ಉತ್ಸವಕ್ಕೆ ಆಶೀರ್ವದಿಸಿ ಅಲ್ಲಿಂದ ಮೂಡಬಿದ್ರೆಗೆ ಪ್ರಯಾಣ ಬೆಳೆಸಿದರು.

ಮೂಡಬಿದ್ರೆಯಲ್ಲಿ ಪುರಪ್ರವೇಶಗೈದ ಉಭಯ ಶ್ರೀ ಶ್ರೀಗಳನ್ನು ಪೌರಸಮ್ಮಾನ ಸಮಿತಿಯ ಅಧ್ಯಕ್ಷರಾದ ಡಾ.ಮೋಹನ ಆಳ್ವರವರು ಹಾರಾರ್ಪಣೆಗೈದು ಸ್ವಾಗತಿಸಿದರು. ನಂತರ ಮಂಗಳ ವಾದ್ಯಗಳೊಂದಿಗೆ ವಿದ್ಯಾಗಿರಿಯ ಡಾ| ವಿ.ಎಸ್. ಆಚಾರ್ಯ ಸಭಾಂಗಣಕ್ಕೆ ಬರಮಾಡಿಕೊಂಡು ವೇದಿಕೆಯಲ್ಲಿ ಶ್ರೀ ಚಂದ್ರಮೌಳೀಶ್ವರ ದೇವರನ್ನು ಪ್ರತಿಷ್ಠಾಪಿಸಲಾಯಿತು. ಶ್ರೀ ಬೊಕ್ಕಸ ಚಂದ್ರಶೇಖರ ರಾಯರು ಸ್ವಾಮೀಜಿಗಳವರಿಗೆ ಧೂಳೀ ಪಾದಪೂಜೆ ಸಲ್ಲಿಸಿದರು. ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರು ಚಂದ್ರಮೌಳೀಶ್ವರ ದೇವರಿಗೆ ಸಂಜೆಯ ಪೂಜೆ ನೆರವೇರಿಸಿದರು. ರಾತ್ರಿ ಶ್ರೀ ಶ್ರೀಗಳು ಶ್ರೀ ಬೊಕ್ಕಸ ಚಂದ್ರಶೇಖರ ರಾಯರ ನಿವಾಸದಲ್ಲಿ ವಿಶ್ರಾಂತಿ ಪಡೆದರು. ತಾ.30–06–2017ರಂದು ಶ್ರೀ ಶ್ರೀಗಳು ಮೂಡಬಿದ್ರೆಯ ನಾಗರಿಕರಿಂದ ಹಾಗೂ ನಗರಾಡಳಿತದ ವತಿಯಿಂದ ಪೌರಸಮ್ಮಾನ ಸ್ವೀಕರಿಸಿದರು. ಶ್ರೀ ಶ್ರೀಗಳು ಬುದ್ಧಿಶಕ್ತಿ, ವಿವೇಕ ಹಾಗೂ ವಿವೇಚನಾಶಕ್ತಿ ಇರುವುದು ಮನುಷ್ಯರಿಗೆ ಮಾತ್ರ. ಈ ಬುದ್ಧಿಶಕ್ತಿಯನ್ನು ಸನ್ಮಾರ್ಗದಲ್ಲಿ ಮುನ್ನಡೆಸಿ ಭಗವತ್‌ಕೃಪೆಗೆ ಪಾತ್ರರಾಗಿರಿ ಎಂದು ತಮ್ಮ ಅನುಗ್ರಹ ಸಂದೇಶದಲ್ಲಿ ನುಡಿದರು. ಈ ಸಂದರ್ಭದಲ್ಲಿ ನಮ್ಮ ಸಮಾಜದ ಸಂಘಸಂಸ್ಥೆಗಳೂ ಸೇರಿದಂತೆ ಅನೇಕ ಸಂಘಸಂಸ್ಥೆಗಳು ಹಾಗೂ ಭಕ್ತರು ಶ್ರೀ ಶ್ರೀಗಳಿಗೆ ಫಲಪುಷ್ಪ ಸಮರ್ಪಿಸಿ ಆಶೀರ್ವಾದ ಪಡೆದರು. ಉಡುಪಿಯಿಂದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಪದಾಧಿಕಾರಿ ಗಳು ಹಾಗೂ ಸಮಾಜಬಾಂಧವರು ತಾ.29–6–2017ರಂದು ಸಂಜೆ ಗುರುಗಳನ್ನು ಭೇಟಿ ಮಾಡಿ ಫಲಪುಷ್ಪ ಸಮರ್ಪಿಸಿ ಚಂದ್ರಮೌಳೀಶ್ವರ ದೇವರ ಪೂಜೆಯನ್ನು ವೀಕ್ಷಿಸಿ ಗುರುಗಳ ಆಶೀರ್ವಾದ ಮಂತ್ರಾಕ್ಷತೆ ಪಡೆದರು.



**ಕಾಸರಗೋಡಿಗೆ ಆಗಮಿಸಿದ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಮತ್ತು ತತ್ಕರಕಮಲ ಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪಾದಪೂಜೆಯನ್ನು ನೆರವೇರಿಸಿದ ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷ ಶ್ರೀ ಸುಕುಮಾರ ಆಲಂಪಾಡಿ ಮತ್ತಿತರ ಕಾರ್ಯಕರ್ತರು**

## ಪಡುಬಿದ್ರೆ ಸಂಘದ ವಾರ್ಷಿಕೋತ್ಸವ

ಪಡುಬಿದ್ರೆ ಸಂಘದ ವಾರ್ಷಿಕೋತ್ಸವವು ತಾ.11–06–2017ರ ಆದಿತ್ಯವಾರ ಪಡುಬಿದ್ರೆಯ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿತು. ಉಡುಪಿ ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರ ರಾವ್ ಹಾಗೂ ಕಾರ್ಕಳ ಸಂಘದ ಅಧ್ಯಕ್ಷರಾದ ಶ್ರೀ ಮುರಳಿಧರ ಶರ್ಮ ಇವರು ಮುಖ್ಯ ಅತಿಥಿಗಳಾಗಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಎಮ್.ಕೆ.ಮೋಹನ್ ರಾವ್, ಗೌರವಾಧ್ಯಕ್ಷರಾದ ಶ್ರೀ ಪಿ.ಬಿ.ವಾಸುದೇವರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯಾ, ಡಾ| ಕೆ. ಅರವಿಂದ ಶಾಸ್ತ್ರಿ, ಶ್ರೀ ನಂದಿಕೂರು ಜನಾರ್ಧನ ರಾವ್ ಉಪಸ್ಥಿತರಿದ್ದರು. ಶ್ರೀಮತಿ ಸವಿತಾ ಎರ್ಮಾಳು ಹಾಗೂ ಬೆಂಗಳೂರಿನ ಶ್ರೀ ಎಂ.ವಿಜಯ ಕುಮಾರ್ ಹಾಗೂ ವಿದ್ಯಾ ದಂಪತಿಗಳನ್ನು ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಪ್ರತಿಭಾನ್ವಿತ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ನಡೆಯಿತು. ಸಂಘದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಕಾಸರಗೋಡು : ಶ್ರೀ ಶಂಕರ ಜಯಂತಿ ಆಚರಣೆ

ಕಾಸರಗೋಡಿನ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ಶ್ರೀ ಶಂಕರ ಜಯಂತಿ ಕಾರ್ಯಕ್ರಮವು ತಾ.11–06–2017ರಂದು ನಡೆಯಿತು. ಕೂಡ್ಲಿನ ಶ್ರೀ ಜಗದೀಶ ಇವರ ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿಯರಾದ ಕೃಪಾ ಕೆ.ಜಿ. ಶ್ಯಾನುಭೋಗ್, ಪ್ರಭಾ ರಮೇಶ್ ಇವರ ನೇತೃತ್ವದಲ್ಲಿ ಶ್ರೀ ಶಂಕರ ಸ್ತೋತ್ರಗಳ ಪಾರಾಯಣದೊಂದಿಗೆ ಆರಂಭಗೊಂಡ ಆಚರಣೆಯಲ್ಲಿ ನೆರೆದ ಸಮಾಜಬಾಂಧವರಿಂದ ಶ್ರೀ ಶಂಕರಾಚಾರ್ಯರಿಗೆ ಪುಷ್ಪಾರ್ಚನೆ ನಡೆಯಿತು. ಶ್ರೀ ಶಂಕರರ ಬದುಕು, ಬೋಧನೆ, ಚಿಂತನೆಗಳ ಬಗ್ಗೆ ಶ್ರೀ ಚಂದ್ರಶೇಖರ ಮರ್ದಂಬೈಲು ಇವರು ಸರಳಮಾತುಗಳಲ್ಲಿ ಮನೋಜ್ಞವಾಗಿ ಉಪನ್ಯಾಸ ನೀಡಿದರು. ಸಭಾದ ಉಪಾಧ್ಯಕ್ಷರಾದ ಡಾ| ಕೆ.ಕೆ. ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದರು. ಕೋಶಾಧಿಕಾರಿ ಡಾ| ಎ. ಸತ್ಯನಾಥ್ ಮಾಹಿತಿ ನೀಡಿದರು. ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀಮತಿ ಮಾಲತೀ ಜಗದೀಶ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀ ವಸಂತರಾಜ ವಿ.ಪಿ ವಂದಿಸಿದರು.

## 'ಬಹುಮಾನ' ನಾಟಕ ಸಂಕಲಕ್ಕೆ ಬಹುಮಾನ



ರಾಂ ಎಲ್ಲಂಗಳ ಎಂಬ ಕಾವ್ಯನಾಮ ಹೊಂದಿರುವ ರಾಮರಾಯ ಶ್ಯಾನುಭೋಗ್ ಅವರು ಬರೆದ 'ಬಹುಮಾನ' ಎಂಬ ಮಕ್ಕಳ ನಾಟಕ ಸಂಕಲನಕ್ಕೆ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ 2013ನೇ ಸಾಲಿನ 'ಮಕ್ಕಳ ಚಂದಿರ' ಪುಸ್ತಕ ಪ್ರಶಸ್ತಿ ಲಭಿಸಿದೆ. ಇತ್ತೀಚಿಗೆ ಧಾರವಾಡದಲ್ಲಿ ನಡೆದ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ಮಕ್ಕಳ ಚಂದಿರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಮಾನ್ಯ ಸಿದ್ಧರಾಮಯ್ಯನವರು ಪ್ರಶಸ್ತಿ ಪ್ರದಾನ ಮಾಡಿದರು. ಇದೇ ಕೃತಿಗೆ 2014ರಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ದತ್ತಿ ಪುರಸ್ಕಾರವೂ ಲಭಿಸಿತ್ತು. ಈ ಸಂಕಲನದಲ್ಲಿರುವ ಪ್ಲಾಸ್ಟಿಕೋಪಾಖ್ಯಾನ ಎಂಬ ನಾಟಕವು ಪ್ರಸ್ತುತ ಕೇರಳ ಸರ್ಕಾರದ 8ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಪಠ್ಯವಾಗಿರುವುದು. ಇವರು ಬರೆದ 'ಗೋಡೆಡು ದೀತಿನ ಗಣಪೆ' ತುಳು ನಾಟಕಕ್ಕೆ 2016ನೇ ಸಾಲಿನ ಧರ್ಮಸ್ಥಳ ರತ್ನವರ್ಮ ಹೆಗಡೆ ಪ್ರಶಸ್ತಿ ಲಭಿಸಿತ್ತು. 2014ರಲ್ಲಿ 'ತುಳುವಪ್ಪೆ ಮಗಲ್ ತುಳಸಿ' ಮತ್ತು 2015ನೇ ಸಾಲಿನಲ್ಲಿ 'ಪಡಿಲ್ ಭೂಮಿದ ಕತೆ' ಕೃತಿಗೂ ಈ ಪ್ರಶಸ್ತಿ ಲಭಿಸಿತ್ತು.

**ಪುಸ್ತಕ ಪರಿಚಯ**

## ಸಂಸ್ಕೃತ ಸೂಕ್ತಿಗಳು

**–ಡಾ| ಪಿ. ವಿ. ಸತ್ಯನಾರಾಯಣ**

**ಲೇಖಕರು : ಡಾ| ಎಚ್.ವಿ. ನರಸಿಂಹಮೂರ್ತಿ, ಪ್ರಕಾಶಕರು: ವಿಕಾಸ ಪ್ರಕಾಸನ, "ಚೇತನ", ನೇರಂಬಳ್ಳಿ ರಸ್ತೆ, ಕೋಟೇಶ್ವರ ಅಂಚೆ–576222, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ ದೂರವಾಣಿ:08254–261145. ಪುಟಗಳು:278 ಬೆಲೆ ರೂ.150/–**

ಲೆಕ್ಕಕ್ಕೆ ಸಿಗದಷ್ಟು ಪ್ರಾಚೀನ ಕಾಲದಿಂದ ಭಾರತದಲ್ಲಿ ಅಸ್ತಿತ್ವದಲ್ಲಿದ್ದು, ಈ ದೇಶದ ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ, ರಾಜಕೀಯ ಮತ್ತು ವೈಜ್ಞಾನಿಕ ಅಸ್ತಿತ್ವವನ್ನು ತನ್ನ ಒಡಲೊಳಗೆ ಹಿಡಿದಿಟ್ಟುಕೊಂಡ ಭಾಷೆ, ಸಂಸ್ಕೃತ. ತನ್ನ ಗತಿಚಕ್ರ ಸ್ತಬ್ಧವಾಗುವ ಸಾಧ್ಯತೆಯ ಸೂಚನೆ ಸಿಕ್ಕಾಗ, ಈ ನೆಲದ ಉಪಭಾಷೆಗಳಿಗೆ ತನ್ನ ಜೀವಸತ್ತ್ವವನ್ನು ದಾನ ಮಾಡಿ, ತನ್ನೊಡಲ ರಕ್ತವನ್ನು ಹಂಚಿ ಪೋಷಿಸಿದ ಭಾಷೆ ಸಂಸ್ಕೃತ. ಈ ಅರ್ಥದಲ್ಲಿ ಸಂಸ್ಕೃತ ಭಾರತದ ಆತ್ಮ: ಪ್ರಾಣಶಕ್ತಿ.

ಭಾರತ ಸಂಜಾತ ಭಾಷೆಗಳಲ್ಲೆಲ್ಲ ಅತ್ಯಂತ ಪ್ರಮುಖವಾದ ಸಂಸ್ಕೃತ ಇಂದು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ತನ್ನ ಸತ್ತ್ವ ಮತ್ತು ಸಾಮರ್ಥ್ಯಗಳಿಂದ ಜಗದಗಲ ವ್ಯಾಪಿಸಿದೆ. ರಾಷ್ಟ್ರೀಯ ಭಾವೈಕ್ಯವನ್ನು ಪೋಷಿಸುವ ಸಂಸ್ಕೃತ ಭಾರತವನ್ನು ಒಂದಾಗಿ ಬೆಸೆದಿದೆ. ಏಕೆಂದರೆ ಅದು ಯಾವುದೇ ಒಂದು ನಿರ್ದಿಷ್ಟ ಪ್ರಾಂತ್ಯ, ರಾಜ್ಯ ಅಥವಾ ಧರ್ಮದ ಭಾಷೆಯಲ್ಲ. ಅದು ಇಡೀ ರಾಷ್ಟ್ರದ ಭಾಷೆ. ಈ ಭಾಷೆ ನಮ್ಮ ದೇಶದ ಸಂಸ್ಕೃತಿ ಮತ್ತು ರಾಷ್ಟ್ರೀಯ ಏಕತೆಯ ಪ್ರತೀಕ. ಇಂತಹ ಭಾಷೆಯನ್ನು ಕಳೆದುಕೊಂಡರೆ ಭಾರತವು 'ಭಾರತ'ವಾಗಿ ಉಳಿಯುದು. ಅದಕ್ಕೆ ಬೇರೆ ಏನಾದರೂ ಹೆಸರನ್ನು ಹುಡುಕಬೇಕಾದೀತು.

ಈ ನಿಟ್ಟಿನಿಂದ ಬಹುಶ್ರುತ ವಿದ್ವಾಂಸರೂ, ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾ| ಎಚ್.ವಿ ನರಸಿಂಹಮೂರ್ತಿಯವರ 'ಸಂಸ್ಕೃತ ಸೂಕ್ತಿಗಳು' ಎಂಬ ಈ ಪುಸ್ತಕವು ಸಂಸ್ಕೃತಾಭಿಮಾನಿಗಳಿಗೆ ಮಾತ್ರವಲ್ಲ ಭಾರತದ ಅಭಿಮಾನಿಗಳಿಗೆಲ್ಲ ಅತ್ಯಂತ ಉಪಯುಕ್ತವಾದ ಪುಸ್ತಕ. ಸುಮಾರು ಮೂರು ಸಾವಿರಕ್ಕೂ ಹೆಚ್ಚು ಸಂಸ್ಕೃತ ಸೂಕ್ತಿಗಳನ್ನು ಆಯ್ದು ಸಂಗ್ರಹಿಸಿ, ಅದನ್ನು ಸರಳವಾದ ಕನ್ನಡ ಅನುದಾನದೊಂದಿಗೆ ಪ್ರಕಟಿಸಿದ್ದಾರೆ. ವೇದಗಳಿಂದ ಆರಂಭಿಸಿ. ಆಧುನಿಕ ಕಾಲದವರೆಗೂ ಬಂದಿರುವ ನಾನಾ ಗ್ರಂಥಗಳಿಂದ ಆಯ್ದ ಸೂಕ್ತಿಗಳು ಇಲ್ಲಿವೆ. ಜನ ಸಾಮಾನ್ಯರು ಸಂದರ್ಭೋಚಿತವಾಗಿ ಬಳಸುವ ಪುಟ್ಟ–ಪುಟ್ಟ ಸೂಕ್ತಿಗಳು. ಶ್ಲೋಕಾರ್ಧಗಳು ಇಲ್ಲಿ ಸಾಕಷ್ಟಿವೆ.

ಯಕ್ಷಗಾನ ಕಲಾವಿದರು, ಹರಿಕತೆಯ ದಾಸರು, ಪ್ರವಚನಕಾರರು, ನ್ಯಾಯವಾದಿಗಳು, ಶಾಲಾ–ಕಾಲೇಜು ಶಿಕ್ಷಕರು–ಹೀಗೆ ಬಹುಮಂದಿ ಈ ಪುಸ್ತಕದಿಂದ ಪ್ರಯೋಜನ ಪಡೆಯಬಹುದಾಗಿದೆ. ಗದ್ಯರೂಪದ ಇಲ್ಲಿನ ಎಲ್ಲಾ ಸೂಕ್ತಿಗಳನ್ನೂ, ಆಕಾರಾದಿಯಾಗಿ ಜೋಡಿಸಿ, ಓದುಗರಿಗೆ ಅನುಕೂಲ ಕಲ್ಪಿಸಲಾಗಿದೆ. ಇಲ್ಲಿಯ ಎಲ್ಲ ಉಕ್ತಿಗಳು ಹಿತವೂ, ಮನೋಹರವೂ ಆಗಿವೆ. ಸಂಸ್ಕೃತ ಸಾಹಿತ್ಯದ ಸಾರ ಸಂಗ್ರಹವಾದ ಈ ಪುಸ್ತಕ ಒಂದರ್ಥದಲ್ಲಿ ಭಾರತೀಯ ಸಂಸ್ಕೃತಿಯ ಒಳನೋಟವನ್ನು ನೀಡುತ್ತದೆ. ಆದ್ದರಿಂದ ಶಾಲೆ–ಕಾಲೇಜುಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಾತ್ರವಲ್ಲ, ಮನೆ–ಮನೆಗಳಲ್ಲಿಯೂ ಇರಬೇಕಾದ ಶ್ರೇಷ್ಠ ಕೃತಿಯಿದು.

ಕ್ರಿಯಾಶೀಲ ಲೇಖಕರೂ, ಹಿರಿಯ ಸಾಹಿತಿಗಳೂ ಆದ ಡಾ| ಎಚ್. ನರಸಿಂಹ ಮೂರ್ತಿಯವರ ಈ ಕೃತಿಯು ಮತ್ತು ಉದ್ದಿಷ್ಟವಾಗಿರುವ ಇಂತಹ ಕೃತಿಗಳೂ ಬಹುಜನಪ್ರಿಯವಾಗಲಿ; ಸಂಸ್ಕೃತದ ಅನರ್ಘ್ಯರತ್ನಗಳು ಪಂಡಿತ–ಪಾಮರರೆಲ್ಲರಿಗೂ ಲಭ್ಯವಾಗಲಿ; ಹಾಗೂ ಶ್ರೇಷ್ಠ ಮೌಲ್ಯಗಳ ಅರಿವು–ಆಚರಣೆಗಳಿಂದ ಜನತೆಯ ಜೀವನವು ಸರಸವಾಗಿ ಸಂಪನ್ನವಾಗಲಿ–ಎಂಬ ಹಾರೈಕೆ ಡಾ| ಮೂರ್ತಿಯವರ ಅಭಿಮಾನಿಗಳೆಲ್ಲರದು.

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



# ಸುರಕ್ಷಿತ ವಾಹನ ಚಾಲನೆ

-ಎನ್.ಪದ್ಮರಾಜ ರಾವ್, ನಿವೃತ್ತ ಪ್ರಾಂಶುಪಾಲರು, ಸರಕಾರಿ ಐಟಿಐ ಕಾಲೇಜು, ಹುಬ್ಬಳ್ಳಿ

ನಮ್ಮ ಸಮಾಜದ ಯುವಕ ಯುವತಿಯರಿಗೆ ನನ್ನ ಹಾರ್ದಿಕ ಶುಭಾಶಯಗಳು. ನೀವು 16 ವರ್ಷದವರಾಗಿದ್ದರೆ ಗೇರ್ ಇಲ್ಲದ ವಾಹನವನ್ನು ಚಲಿಸಲು ಲೈಸೆನ್ಸ್ ಪಡೆಯಲು ಅರ್ಹರಾಗಿರುತ್ತೀರಿ. 18 ವರ್ಷದವರು ಎರಡು ಚಕ್ರಗಳ ಗೇರ್ ಇದ್ದ ವಾಹನಗಳನ್ನೂ, ಹಗುರವಾದ ಕಾರುಗಳನ್ನೂ ಚಾಲನೆ ಮಾಡುವ ಲೈಸೆನ್ಸ್ ಪಡೆಯಲು ಅರ್ಹರಾಗಿರುತ್ತೀರಿ. ನೀವು ಯಾವಾಗಲೂ ವಾಹನಗಳನ್ನು ಚಾಲನೆ ಮಾಡುವಾಗ ತುಂಬಾ ಜಾಗರೂಕರಾಗಿರಬೇಕು.

**ಕಲಿಕಾ ಪರವಾನಿಗೆ (LLR) ಪಡೆಯುವುದು ಹೇಗೆ?**

ಆರ್.ಟಿ.ಓ.ಗೆ ಸಲ್ಲಿಸಬೇಕಾದ ಫಾರಂಗಳು :

ಫಾರಂ 1 ಮೆಡಿಕಲ್ ಸರ್ಟಿಫಿಕೇಟ್. ಇದರಲ್ಲಿ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರ್‌ರವರ ಸಹಿ ಫೋಟೋದ ಮೇಲೆ ಸೀಲ್ ಸಹಿತ ಇರತಕ್ಕದ್ದು.

ಫಾರಂ 2 ದ್ವಿಪ್ರತಿಯಲ್ಲಿ ಕಲಿಕಾ ಪರವಾನಿಗೆ ಪಡೆಯಲು ಅರ್ಜಿಗಳು.

ಫಾರಂ 3 ಅರ್ಜಿಗಳು ದ್ವಿಪತ್ರಿಯಲ್ಲಿರಬೇಕು.

**ಬೇಕಾದ ದಾಖಲೆಗಳು :**

1. ವಯಸ್ಸಿನ ಪ್ರಮಾಣ ಪತ್ರ: ಹುಟ್ಟಿದ ಜನನ ತಾರೀಕಿನ ಜೆರಾಕ್ಸ್ ಪ್ರತಿ ಅಥವಾ ಪಾಸ್‌ಪೋರ್ಟು ಅಥವಾ ಶಾಲೆಯ, ಜನನ ದಾಖಲೆಯ ಪ್ರತಿ.
2. ವಿಳಾಸದ ಪ್ರಮಾಣ ಪತ್ರ: ರೇಶನ್ ಕಾರ್ಡು, ಜನಗಣತಿಯ ಐಡಿ ಕಾರ್ಡು ಅಥವಾ ಪಾಸ್‌ಪೋರ್ಟ್, ಜೀವವಿಮೆ ಪಾಲಿಸಿ, ಅಥವಾ ದೂರವಾಣಿ ಬಿಲ್ಲು ಇವುಗಳ ಜೆರಾಕ್ಸ್ ಪ್ರತಿ.
3. ಭಾವಚಿತ್ರಗಳು–4 ಪಾಸ್‌ಪೋರ್ಟ್ ಅಳತೆಯದ್ದು. ಇವುಗಳಲ್ಲಿ ಒಂದನ್ನು ಫಾರಂ ನಂ.1ರಲ್ಲಿ ಅಂಟಿಸಿರಬೇಕು.
4. ಆರ್.ಟಿ.ಓ.ರವರು ನಿಗದಿಪಡಿಸಿದ ಶುಲ್ಕ ಪಾವತಿಸಬೇಕು.

L.L.R ಸಿಕ್ಕಿದ ಬಳಿಕ ನಿಮ್ಮನ್ನು ಟೆಸ್ಟ್‌ಗೆ ಕರೆಯುತ್ತಾರೆ. ನಿಮ್ಮೊಡನೆ ನಿಮ್ಮ ಇನ್‌ಸ್ಟ್ರಕ್ಟರ್, ಅಥವಾ ನಿಮ್ಮ ಗೆಳೆಯ, ಅಥವಾ ನಿಮ್ಮ ಸಂಬಂಧಿ (ಲೈಸೆನ್ಸ್ ಇದ್ದವರು) ಇರಬೇಕು. ನೀವು ನಿಮ್ಮ ಮೋಟಾರು ಸೈಕಲ್, ಅಥವಾ ಮೋಟಾರು ಕಾರಿನ ಮುಂದಿನ ಭಾಗದಲ್ಲಿಯೂ, ಹಿಂದಿನ ಭಾಗದಲ್ಲಿಯೂ 'L' Sign ಹಚ್ಚಿರಬೇಕು.

L.L.Rನ ಅವಧಿ: ಇದು 6 ತಿಂಗಳು ಇರುತ್ತದೆ. ಪರ್ಮನೆಂಟ್ ಲೈಸೆನ್ಸ್ ಪಡೆಯುವ 6 ತಿಂಗಳಲ್ಲಿ ಸಾಧ್ಯವಾಗದಿದ್ದರೆ ಪುನಃ LLRಗೆ ಅರ್ಜಿಹಾಕತಕ್ಕದ್ದು. 1 ತಿಂಗಳ ಬಳಿಕ regular Driving licence ಪಡೆಯಬಹುದು.

ಪರ್ಮನೆಂಟ್ ಲೈಸೆನ್ಸ್ ಪಡೆಯಲು ಈ ಕೆಳಗಿನ ಅರ್ಜಿಗಳು ಇರತಕ್ಕದ್ದು.

1. ಫಾರಂ 4
2. ಕಲಿಕಾ ಪರವಾನಿಗೆಯ ಮೂಲಪ್ರತಿ
3. 3 ಸ್ಟ್ಯಾಂಪ್ ಗಾತ್ರದ ಭಾವಚಿತ್ರಗಳು

ಪರ್ಮನೆಂಟ್ ಲೈಸೆನ್ಸ್ ಪಡೆಯುವ ಪರೀಕ್ಷೆ ಪಾಸಾದ ಬಳಿಕ ಆರ್‌ಟಿಓರವರು ಪರ್ಮನೆಂಟ್ ಡ್ರೈವಿಂಗ್ ಲೈಸೆನ್ಸ್‌ನ್ನು ನಿಮಗೆ ಕೊಡುತ್ತಾರೆ. ನೀವು ಸರಿಯಾಗಿ ಚಾಲನೆ, ರಸ್ತೆ ನಿಯಮಗಳು, ರಸ್ತೆ ಸಂಚಾರದ ಸಿಗ್ನಲ್‌ಗಳು ಎಲ್ಲಾ ತಿಳಿದಿರಬೇಕು. ತುಂಬಾ ಕಿರಿದಾದ ರಸ್ತೆಗಳು, ಜನಜಂಗುಳಿ ರಸ್ತೆಗಳು, ಪಾರ್ಕಿಂಗ್ ವ್ಯವಸ್ಥೆ ಎಲ್ಲಾ ತಿಳಿದಿರಬೇಕು.

**ವಾಹನ ಚಲಾಯಿಸುವಾಗ ನೀವು ಅನುಸರಿಸಬೇಕಾದ ಕೆಲವು ಸಲಹೆಗಳು :**

1. ವಾಹನವನ್ನು ಸ್ಟಾರ್ಟ್ ಮಾಡುವಾಗ ಗೇರ್ ಬದಲಾಯಿಸುವಾಗ ಜರ್ಕ್ ಇರಬಾರದು.
2. ಜನಸಂದಣಿಗೆ ಅನುಗುಣವಾಗಿ ಗೇರ್ ಬದಲಾಯಿಸಬೇಕು.
3. ವಾಹನವನ್ನು ಮುಂದಕ್ಕೆ ಮತ್ತು ಹಿಂದಕ್ಕೆ (reverse gear) ಚಲಿಸಲು ಯೋಗ್ಯರಿರಬೇಕು.
4. ಹಾರ್ನ್‌ನ್ನು ಮಿತವಾಗಿ ಬಳಸಬೇಕು.
5. ಬೇರೆಯವರ ವಾಹನಗಳ ಚಲಿಸುವಿಕೆ, ಮತ್ತು ಜನರ ಚಲನವಲನ ಅರಿತಿರಬೇಕು.
6. ದ್ವಿಚಕ್ರ ವಾಹನ ನಡೆಸುವಾಗ U ಟರ್ನ್ ಮಾಡುವಾಗ ನಿಮ್ಮ ಕಾಲುಗಳು ನೆಲಕ್ಕೆ ತಾಗಬಾರದು.

ವಾಹನವನ್ನು ನಿಲ್ಲಿಸುವಾಗ (ಎಮರ್ಜೆನ್ಸಿ) ಹಿಂದಿನ ವಾಹನಗಳಿಗೆ ಡಿಕ್ಕಿಯಾಗಬಾರದು.

**ರಸ್ತೆಯ ಮೂಲ ನಿಯಮಗಳು :**

1. ರಸ್ತೆಯ ಎಡಬದಿಯಲ್ಲೇ ಚಲಿಸಿರಿ. ನಿಮ್ಮ ಎದುರಿನ ವಾಹನಗಳನ್ನು ಚೆನ್ನಾಗಿ ಹಾದುಹೋಗಲಿ ಬಿಡಿ.
2. ನಿಮ್ಮ ಬಲಭಾಗದ ವಾಹನಗಳಿಗೆ ರೋಡ್ ಜಂಕ್ಷನ್‌ನಲ್ಲಿ ಹೋಗಲು ಅವಕಾಶ ಕೊಡಿ.
3. ಮುಂದಕ್ಕೆ ಹೋಗುವ ವಾಹನಗಳಿಗೆ ನೀವು ಎಡಕ್ಕೆ ಅಥವಾ ಬಲಕ್ಕೆ ತಿರುಗುವಾಗ ಅವಕಾಶ ಕೊಡಿ.
4. ನೀವು ಎಡಕ್ಕೆ ತಿರುಗುವಾಗ ಆದಷ್ಟು ಎಡಕ್ಕೆ ನಿಮ್ಮ ವಾಹನವನ್ನು ಚಲಿಸಿರಿ.
5. ನೀವು ರೋಡ್ ಜಂಕ್ಷನ್‌ನಲ್ಲಿ, ಜನರು ದಾಟುವಲ್ಲಿ, ಶಾಲಾ ವಠಾರದಲ್ಲಿ ದೇವಸ್ಥಾನಗಳ ಆವರಣದಲ್ಲಿ, ನಿಮ್ಮ ವಾಹನವನ್ನು ನಿಧಾನಿಸಿ. ಮತ್ತು ಬೇರೆಯವರಿಗೆ ಸೂಚನೆ ಮಾಡಿ.
6. ನೀವು ಎರಡು ಚಕ್ರಗಳ ವಾಹನವನ್ನು ಚಲಾಯಿಸುವಾಗ ಹೆಲ್ಮೆಟ್ ಸರಿಯಾಗಿ ಹಾಕಿಕೊಳ್ಳಿ.
7. ವೇಗಮಿತಿಯನ್ನು ಅನುಸರಿಸಿ.
8. ನೀವು 40 ಕಿ.ಮೀ/ಗಂಟೆ ವೇಗದಲ್ಲಿ ವಾಹನ ಚಲಿಸುವಾಗ ನಿಮ್ಮ Brake distance 22 mts ಇರುತ್ತದೆ. 60 ಕಿ.ಮೀ/ಗಂಟೆ ವೇಗವಿದ್ದಲ್ಲಿ Brake distance 42 mts ಇರುತ್ತದೆ.
9. ನಿಮ್ಮ ವಾಹನವು ಮುಂದಿನ ವಾಹನಕ್ಕೆ ಡಿಕ್ಕಿಯಾಗದಂತೆ ಅಂತರ ಕಾಪಾಡಿ.
10. ನೀವು ಮುಂದಿನ ವಾಹನವನ್ನು ಹಿಂದಿಕ್ಕುವಾಗ ಹಳದಿ ಗೆರೆಯನ್ನು ದಾಟಬಾರದು.
11. ರಸ್ತೆಗಳ ಕೂಡುವ ಸ್ಥಳದಲ್ಲಿ ನಿಮ್ಮ ವಾಹನವನ್ನು "ನಿಲ್ಲಿಸಿ ಗೆರೆ"ಯ ಮುಂದೆ ನಿಲ್ಲಿಸಬೇಡಿ.
12. ದಾರಿ ದಾಟುವವರು ಅವರ ಜಾಗದಲ್ಲಿ ದಾಟಲು ಅವಕಾಶ ಕೊಡಿ.
13. ಸಿಗ್ನಲ್‌ನ ಹತ್ತಿರ ನಿಮ್ಮ ವಾಹನವನ್ನು ನಿಲ್ಲಿಸಬಾರದು. "ನಿಲ್ಲಿಸಿ ಗೆರೆ"ಯಿಂದ ಹಿಂದೆ ನಿಲ್ಲಿಸಿರಿ.
14. ಎರಡು ಚಕ್ರಗಳ ವಾಹನವು ಇಬ್ಬರಿಗೆ ಮಾತ್ರ, ಹೆಚ್ಚು ಮಕ್ಕಳನ್ನು ಹತ್ತಿಸಬೇಡಿ.
15. ಹಸಿರು ದೀಪವನ್ನು ಕಾಯಿರಿ.
16. ಬಲ ಬದಿಯಲ್ಲಿ ಮಾತ್ರ ವಾಹನವನ್ನು ಹಿಂದಿಕ್ಕಬಹುದು. ಸೇತುವೆಗಳಲ್ಲಿ, ಜಂಕ್ಷನ್‌ಗಳಲ್ಲಿ, ಕಿರಿದಾದ ಮಾರ್ಗಗಳಲ್ಲಿ, ಶಾಲಾ ವಠಾರಗಳಲ್ಲಿ, ವಾಹನಗಳನ್ನು ಹಿಂದಿಕ್ಕಬಾರದು.
17. ಅಂಕುಡೊಂಕು ಸವಾರಿ ಮಾಡಬಾರದು.

ನೀವು ಈ ಎಲ್ಲಾ ನಿಯಮಗಳನ್ನು ಚೆನ್ನಾಗಿ ಪಾಲಿಸಬೇಕು.

ಪೋಲಿಸ್ ಇಲಾಖೆಯವರು ರಸ್ತೆಗಳಲ್ಲಿ ಕೆಲವು ಚಿಹ್ನೆಗಳನ್ನು ಅಳವಡಿಸಿರುತ್ತಾರೆ. ಈ ಚಿಹ್ನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಕೆಲವು ರಸ್ತೆಗಳಲ್ಲಿ ಪ್ರವೇಶ ಮಾಡಬಾರದು ಎಂದೂ, ತಿರುಗಬಾರದು ಎಂದೂ, ನಿಲ್ಲಿಸಬಾರದು ಎಂದೂ ಚಿಹ್ನೆಗಳಿರುತ್ತವೆ. ಇವನ್ನು ಪಾಲಿಸದಿದ್ದರೆ ಅಪಘಡಗಳು ಅಥವಾ ಟ್ರಾಫಿಕ್ ಜಾಮ್ ಸಂಭವಿಸಬಹುದು.

ಕೆಲವು ಕಡೆ ಜನರು ರಸ್ತೆ ದಾಟಲು ಚಿಹ್ನೆಗಳಿರುತ್ತವೆ. ಅಲ್ಲಿ ಅವರಿಗೆ ಪ್ರಾಶಸ್ತ್ಯಕೊಡಲು ನೀವು ವಾಹನಗಳನ್ನು ನಿಲ್ಲಿಸಬೇಕಾಗುತ್ತದೆ. ಶಾಲಾ ವಠಾರಗಳಲ್ಲಿ ನಿಮ್ಮ ವಾಹನದ ವೇಗವನ್ನು ಕಡಿಮೆ ಮಾಡಬೇಕು. ಕೆಲವು ಜಂಕ್ಷನ್‌ಗಳಲ್ಲಿ ಆಟೋಮೇಟಿಕ್ ಚಿಹ್ನೆಗಳಿರುತ್ತವೆ. ಅಲ್ಲಿ ಮೂರು ಬಣ್ಣದ ದೀಪಗಳು ಉರಿಯುತ್ತವೆ. ಕೆಂಪು, ಹಳದಿ ಹಸುರು ಬಣ್ಣವಿರುತ್ತವೆ. ಕೆಂಪು ಬಣ್ಣ ಇದ್ದರೆ ವಾಹನವನ್ನು ನಿಲ್ಲಿಸತಕ್ಕದ್ದು. ಹಳದಿ ಇದ್ದರೆ ಕೆಂಪು ಬಣ್ಣ ಬರುತ್ತದೆ ಎಂದು ತಿಳಿಯತಕ್ಕದ್ದು ಮತ್ತು ವಾಹನವನ್ನು ನಿಲ್ಲಿಸತಕ್ಕದ್ದು. ಹಸುರು ಬಣ್ಣ ಬಂದಾಗ ನೀವು ಮುಂದಕ್ಕೆ ಹೋಗಬಹುದು.

ವಾಹನಗಳನ್ನು ನಡೆಸುವಾಗ, ನಿಲ್ಲಿಸುವಾಗ ಮತ್ತು ಎಡಕ್ಕೆ ತಿರುಗುವಾಗ, ಬಲಕ್ಕೆ ತಿರುಗುವಾಗ ಅಥವಾ 'U' ತಿರುಗುವಾಗ ನೀವು ಹಿಂದಿನ ವಾಹನಗಳಿಗೆ ಸಂಕೇತ ಮೂಲಕವಾಗಿ ತಿಳಿಸಬೇಕು. ಈಗಿನ ವಾಹನಗಳಿಗೆ ಸಿಗ್ನಲ್ ಇಂಡಿಕೇಟರ್ ಅಳವಡಿಸಿರುತ್ತಾರೆ.

ಅತಿ ವೇಗ ಚಾಲನೆ ಮತ್ತು ಅಜಾಗರೂಕತೆಯ ಚಾಲನೆ ಇವು ಅಪಘಡಗಳಿಗೆ ಮೂಲಕಾರಣ. ಬಲಬದಿಯ ಎದುರು ಮತ್ತು ಹಿಂಬದಿಯ ಬಾಗಿಲುಗಳನ್ನು ಹಿಂದೆ ಬರುವ ವಾಹನಗಳನ್ನು, ಸೈಕಲ್ ಸವಾರರನ್ನು, ಜನರನ್ನು ನೋಡಿ ತೆರೆಯಬೇಕು. ಅಪಘಾತ ವಲಯಗಳಲ್ಲಿ ನಿಮ್ಮ ವೇಗವನ್ನು ಕಡಿಮೆ ಮಾಡಬೇಕು. ಮುಂದೆ ಅಡೆತಡೆಯಿದ್ದರೆ ನಿಮ್ಮ ವಾಹನವನ್ನು ಹಿಂದೆ ಬರುವ ವಾಹನಗಳಿಗೆ ಅಡ್ಡಿಯಾಗದಂತೆ ನಡೆಸಬೇಕು.

ಮುಂದೆ ಇದ್ದ ವಾಹನಗಳಿಗೂ, ನಿಮ್ಮ ವಾಹನಗಳಿಗೂ ಸರಿಯಾದ ಅಂತರವಿರಬೇಕು ನೀವು ತುಂಬಾ ದಣಿವಾಗಿದ್ದರೆ ವಾಹನವನ್ನು ನಡೆಸಬಾರದು. ವಾಹನವನ್ನು ಚಲಿಸುವಾಗ ಏಕಾಗ್ರತೆ ಇರಬೇಕು. ಸಂಭಾಷಣೆ ಮಾಡಬಾರದು. ರಾತ್ರಿ ಪ್ರಯಾಣ ಮಾಡುವಾಗ ನಿಮ್ಮ ಹೆಡ್‌ಲೈಟ್‌ನ್ನು ಮಂದ ಮಾಡಬೇಕು. ನಿಮ್ಮ ಹೆಡ್‌ಲೈಟ್‌ನ ಕಿರಣಗಳು ಎದುರು ಬರುವ ವಾಹನಗಳಿಗೆ ಅಡ್ಡಿಯಾಗಬಾರದು. ನಿಮ್ಮ ವಾಹನಗಳ ಬ್ರೇಕ್‌ನ್ನು ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕು.

**ಮುಂಜಾಗ್ರತೆಗಳು :**

1. ಬ್ರೇಕ್ ಫೇಲ್ ಆದರೆ ತುಂಬಾ ತಾಳ್ಮೆಯಿರಬೇಕು, ಗಲಿಬಿಲಿಗೊಳ್ಳಬಾರದು.
2. ಆಕ್ಸಿಲೇಟರ್‌ನಿಂದ ನಿಮ್ಮ ಕಾಲನ್ನು ತೆಗೆದು ಕೆಳಗಿನ ಗೇರ್‌ಗೆ ಬದಲಾಯಿಸಿರಿ.
3. ಹ್ಯಾಂಡ್‌ಬ್ರೇಕ್‌ನ್ನು ಉಪಯೋಗಿಸಿರಿ.
4. ನಿಮ್ಮ ವಾಹನವನ್ನು ಬದಿಗೆ ಸರಿಸಿರಿ.
5. ಸ್ಟೇರಿಂಗ್ ಫೇಲ್ ಆದರೆ ವೇಗವನ್ನು ಕಡಿಮೆ ಮಾಡಿ.
6. ಬ್ರೇಕ್‌ನ್ನು ಒತ್ತಿರಿ.
7. ಟಯರ್ ಸಿಡಿದರೆ ಸ್ಟೇರಿಂಗ್ ಗಟ್ಟಿಯಾಗಿ ಹಿಡಿದು ವಾಹನವನ್ನು ಹತೋಟಿಗೆ ತಂದು ನಿಲ್ಲಿಸಿರಿ.
8. ಟಯರ್ ಕೆಟ್ಟದಾಗಿದ್ದರೆ, ರಸ್ತೆಯಲ್ಲಿ, ಎಣ್ಣೆಯಿದ್ದರೆ, ತೇವವಾಗಿದ್ದರೆ (ಮಳೆಗಾಲದಲ್ಲಿ) ನಿಮ್ಮ ವಾಹನ ಜಾರಿದರೆ ಬ್ರೇಕ್ ಒತ್ತಬೇಡಿ. ಮೆಲ್ಲನೆ ನಿಮ್ಮ ವಾಹನವನ್ನು ಚಾಲನೆ ಮಾಡಿರಿ.
9. ರಸ್ತೆಗಳು ಕೂಡುವಿಕೆ ಇದ್ದಲ್ಲಿ ನಿಮ್ಮ ವಾಹನವನ್ನು ನಿಲ್ಲಿಸಿ ಮುಂದಕ್ಕೆ ಚಲಿಸಿರಿ.
10. ಮುಖ್ಯ ರಸ್ತೆಯಲ್ಲಿ ಹೋಗುವವರಿಗೆ ಅವಕಾಶ ಕೊಡಿ ಮತ್ತು ನಿಮ್ಮ ಬಲಬದಿಯಲ್ಲಿ ಬರುವ ವಾಹನಗಳಿಗೆ ಮುಂದೆ ಹೋಗುವಂತೆ ಅವಕಾಶ ಕೊಡಿ.

ವಾಹನವನ್ನು ಚಲಿಸುವಾಗ ಈ ಕೆಳಗಿನವುಗಳನ್ನು ನಿಮ್ಮೊಂದಿಗೆ ಇರಿಸಬೇಕು.

1. ಚಾಲನಾ ಪರವಾನಿಗೆ
2. ವಾಹನಾ ನೋಂದಣಿ ಪತ್ರ
3. ಮಾಲಿನ್ಯ ಪ್ರಮಾಣ ಪತ್ರ
4. ರಸ್ತೆ ತೆರಿಗೆ ರಶೀದಿ
5. ವಾಹನ ವಿಮಾ ಪತ್ರ

ಅಪಘಡಗಳು ಸಂಭವಿಸಿದಾಗ ನೀವು ಮತ್ತು ಉಳಿದ ವಾಹನ ಚಾಲಕರ ರಕ್ಷಣೆ ಮಾಡಬೇಕು. ನೀವು ಅವರ ರಕ್ಷಣೆಗೆ ಮೆಡಿಕಲ್ ಕೇರ್ ತೆಗೆದುಕೊಳ್ಳಬೇಕು. ಗಾಯಾಳುವನ್ನು ಕೂಡಲೇ ಹತ್ತಿರದ ಆಸ್ಪತ್ರೆಗೆ ಸೇರಿಸಬೇಕು ಮತ್ತು ಅವರ ಸಂಬಂಧಿಗಳಿಗೆ ತಿಳಿಸಬೇಕು. ಸಾಧಾರಣ ಗಾಯಗಳಾಗಿದ್ದರೆ ಆಸ್ಪತ್ರೆಗೆ ಸೇರಿಸುವ ಅವಶ್ಯಕತೆಯಿರುವುದಿಲ್ಲ. ಹತ್ತಿರದ ಪೋಲೀಸ್ ಸ್ಟೇಶನ್‌ನಲ್ಲಿ ಅಪಘಡಗಳು ಹೇಗಾದವು ಎಂಬುದನ್ನು ಅಧೀಕಾರಿಗೆ ತಿಳಿಸಬೇಕು.

ನಮ್ಮ ಸಮಾಜದ ಯುವಕರು ಮತ್ತು ಯುವತಿಯರು ಸುರಕ್ಷಿತವಾಗಿ ಅವರ ವಾಹನಗಳನ್ನು ಚಲಿಸುವಂತೆ ಅವರಿಗೆ ತಾಳ್ಮೆ ಇರಲಿ ಮತ್ತು ನಿಯಮಗಳನ್ನು ಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

## ಹನಿ ಕವನಗಳು

### ಒಂದೇ ಹೆಸರಿರಲಿ

ಒಂದೇ ಜಾತಿಯಲಿ
ಹಲವಾರು ಸಂಘಗಳು।
ಹಲವಾರು ಊರಿನಲಿ
ಹಲವಾರು ಹೆಸರಿನಲಿ
ಗುರುತಿಸಿ ಕೊಂಡಿಹವು॥
ಒಂದೇ ಜಾತಿಯಲಿ
ಅದೆಷ್ಟು ಒಳಜಾತಿ?
ಅದೆಷ್ಟು ಪಂಗಡ?
ಹೇಳುತ್ತ ನಡೆದರು
ಅನ್ಯ ಜನರು॥

### ಅಂತೆ

ಮುದಿ ಗೋವುಗಳನೆಲ್ಲಾ
ವಧಿಸ ಬಹುದಂತೆ?
ಮುದಿ ತಾಯಿಗೂ ಮುಂದೆ
ಇದುವೆ ಗತಿಯಂತೆ?

### ಮಾತು–ಪ್ರೀತಿ

ಮಾತಿಗಿಂತ ದೊಡ್ಡ
ಬಲವಿಲ್ಲ।
ಪ್ರೀತಿಗಿಂತ ದೊಡ್ಡ
ಶಕ್ತಿ ಇಲ್ಲ.
ಮಾತು–ಪ್ರೀತಿ
ಸರಿಯಾಗಿರಲು
ಅದಕ್ಕಿಂತ ದೊಡ್ಡ
ಸುಖ ಬೇರೆ ಇಲ್ಲ.

–ಗೋ.ರಾ.ಕೆ. ಕಡಬ.

### ಯಾರು ಶ್ರೇಷ್ಠರು

ತಂಪಿರುವ ನೆಲದಲಿ
ಗೆದ್ದಲು ಕಟ್ಟಿತು ಹುತ್ತವ
ಹಾವು ಆದರೊಳ ಹೊಕ್ಕು
ತಾನದರ ಒಡೆಯನೆಂದಿತು
ಸ್ವಾರ್ಥ ಮನಜನದೆ ಪೊಕ್ಕು
ಆಟವಾಡಿಸುತಲಿದೆ
ಸೂತ್ರಧಾರಿಯಂತೆ
ಈ ಹುಲು ಮಾನವ ಕುಣಿಯುತಲಿದ್ದಾನೆ
ಅದರ ತಾಳಕ್ಕೆ–ಮೇಳಕ್ಕೆ
ತನ್ನ ತನವ ಮರೆವ
ತನ್ನವರನ್ನೇ ಸುಡುವ
ಈ ಸ್ವಾರ್ಥವ ಬಿಡಲಾಗದು
ನಾನು ನನ್ನದು ಅದುವೇ ಪ್ರಪಂಚ
ಕೊಳದ ಕಪ್ಪೆಯಂತೆ ನಾವೇ ಶ್ರೇಷ್ಠರು?
ಅಲ್ಲಾ ಶ್ರೇಷ್ಠರೆಂದು ಕರೆದುಕೊಂಡರು

ಎಂ.ಗಣೇಶ್ ರಾವ್ ಬಾರಕೂರು

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

# ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2017-18

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.10-09-2017ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

**– ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2017-18**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2017-2018**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.10-09-2017**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2017-18

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ‍್ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.10-09-2017**ರೊಳಗೆ **ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**– ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಉದಯಚಂದ್ರ ಪ್ರತಿಭಾ ಪುರಸ್ಕಾರ 2017-18

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2016-17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನೂ ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮತ್ತು ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ – 576 102** ಇಲ್ಲಿಗೆ **ತಾ.10-09-2017**ರೊಳಗೆ ಕಳುಹಿಸಿ ಕೊಡಬೇಕು.

**– ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

# ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು

## ಪ್ರಕಟಣೆ

2017–18 ನೇ ಸಾಲಿನಲ್ಲಿ ಪಿ.ಯು.ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುವ ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನವನ್ನು ಪಡೆಯಲು **ದಿನಾಂಕ 30–10–2017ರ ಒಳಗೆ** ತಲುಪುವಂತೆ ಅರ್ಜಿಯನ್ನು ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

**ಅರ್ಜಿ ಫಾರ್ಮುಗಳು ದೊರೆಯುವ ವಿಳಾಸಗಳು ಈ ಕೆಳಗಿನಂತಿವೆ.**

1) ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುರತ್ಕಲ್, ಸುಳ್ಯ, ಬಿ.ಸಿ.ರೋಡ್ ಹಾಗೂ ಕಾರ್ಕಳ ಶಾಖೆಗಳು
2) ಶ್ರೀ ಕೆ.ಹರ್ಷಕುಮಾರ್, ಪ್ರಮೋದ್ ಅಟೋಮೊಬೈಲ್, ಕರಂಗಲ್ಪಾಡಿ, ಮಂಗಳೂರು.
3) ಶ್ರೀ ಬಿ.ಎಸ್.ಅನಿಲ್‌ರಾವ್, ವಿಶ್ರಾಮ್ ಮೋಟಾರ್ಸ್, ಕೊಡಿಯಾಲ್‌ಬೈಲ್ ಮಂಗಳೂರು.
4) ಶ್ರೀ ಉಮೇಶ್‌ಶಾನ್‌ಭಾಗ್, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ.
5) ಶ್ರೀ ಶಾರದಾಮಂಟಪ, ಕುಂಜಿಬೆಟ್ಟು, ಉಡುಪಿ.
6) ಶ್ರೀ ಭೋಜರಾವ್, ಸುಲಗ್ನ ಮಾಸಪತ್ರಿಕೆ, ಕುಕ್ಕಿಕಟ್ಟೆ, ಉಡುಪಿ.
7) ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ.
8) ಶ್ರೀ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು.
9) ಶ್ರೀ ಎಮ್.ಎಸ್. ಅರುಣ್‌ಕುಮಾರ್, ದಿಶಾಬೇಕರಿ, ಉಜಿರೆ.
10) ಶ್ರೀ ಜಗದೀಶ್ ರಾವ್, ಕಾರ್ಯದರ್ಶಿ, ಆದಿಶಂಕರ ಬ್ರಾಹ್ಮಣಸಭಾ, ಮೂಡಬಿದ್ರೆ.
11) ಶ್ರೀ ಮುರಳೀಧರ ಶರ್ಮ, ನಾಗಶ್ರೀ, ಅಂಚೆ:ನಿಟ್ಟೆ, ಅಧ್ಯಕ್ಷರು ಶಂಕರ ಪ್ರತಿಷ್ಠಾನ ಕಾರ್ಕಳ.
12) ಶ್ರೀ ನೆಕ್ರೆ ಶಿವರಾವ್, ಕಾರ್ಯದರ್ಶಿ, ಶಂಕರ ಪ್ರತಿಷ್ಠಾನ, ಕಾರ್ಕಳ.
13) ಶ್ರೀ ಎಮ್.ಕೆ ಮೋಹನ್ ರಾವ್, ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ, ಪಡುಬಿದ್ರೆ.
14) ಶ್ರೀ ಎಮ್.ಎಸ್. ರಘುನಾಥ ರಾವ್, ರಾಜೇಶ್ ಪವರ್ ಪ್ರೆಸ್, ದರ್ಬೆ, ಪುತ್ತೂರು.
15) ಶ್ರೀ ಎನ್.ಎಸ್. ನಟರಾಜ್, ಪುತ್ತೂರು.
16) ಡಾ.ಸದಾಶಿವ ರಾವ್, ಜ್ಯೋತಿ ಆಸ್ಪತ್ರೆ, ಸುಳ್ಯ.
17) ಶ್ರೀ ಬಿ.ಭಾಸ್ಕರ್ ರಾವ್, ಬಾಯಂಬು ಸುಳ್ಯ.
18) ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರಿ ದೇವಸ್ಥಾನ, ಬಳ್ಪ, ಸುಳ್ಯ ತಾಲೂಕು.

---

ಶ್ರೀ. ಕೂಡ್ಲು ವಿಷ್ಣುಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ.105000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ.1,00,000/– ವಂತಿಗೆಯೊಂದಿಗೆ ಸ್ಥಾಪಿಸಿ ಸಿ.ಎ. ಕಲಿಯುವ ಸಮಾಜದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ.

2017–18ನೇ ಸಾಲಿನ ಮೇಲಿನ ಎರಡು ನಿಧಿಗಳ ಪಾರಿತೋಷಕವನ್ನು ಶ್ರೀ ಸಭೆಯು ಅಕ್ಟೋಬರ್ 2017ರಲ್ಲಿ ನಡೆಯುವ ನಾಡ–ಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಬರೆದು **ದಿನಾಂಕ 30–09–2017ರ ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ** ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

---

2017–18ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ, ಎಮ್.ಇ, ಎಮ್.ಬಿ.ಬಿ.ಎಸ್, ಬಿ.ಡಿಎಸ್, ಪಾಲಿಟೆಕ್ನಿಕ್, ಐ.ಟಿ.ಐ, ಎಮ್.ಎ, ಎಮ್.ಎಸ್.ಸಿ., ಎಮ್.ಕಾಂ, ಸಿ.ಎ., ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2017–18ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಮಂಗಳೂರನ್ನು ಸಂಪರ್ಕಿಸಲು ಕೋರಲಾಗಿದೆ.

---

ಶ್ರೀಮತಿ ಶ್ಯಾಮಲ ಎಸ್. ರಾವ್ ತಮ್ಮ ಪತಿ ಶ್ರೀ ಎ. ಸೂರ್ಯಪ್ರಕಾಶ್ ರಾವ್ ಇವರ ಸ್ಮರಣಾರ್ಥ ನಮ್ಮ ಸಮಾಜದ ಬಡ ಕುಟುಂಬದಿಂದ ಬರುವ ಎಸ್.ಎಸ್.ಎಲ್.ಸಿ. ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಕೊಡಲು ಬಯಸಿದ್ದಾರೆ.

2017–18ನೇ ಸಾಲಿನ ಮೇಲಿನ ಪ್ರೋತ್ಸಾಹ ಧನವನ್ನು ಶ್ರೀ ಸಭೆಯು ಅಕ್ಟೋಬರ್ 2017ರಲ್ಲಿ ನಡೆಯುವ ನಾಡ–ಹಬ್ಬದ ಸಂದರ್ಭದಲ್ಲಿ ವಿತರಿಸಲಿದೆ. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಬರೆದು ದಿನಾಂಕ **30–09–2017ರ ಒಳಗೆ ತಲುಪುವಂತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ** ಕಳುಹಿಸಿ ಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿಯ ಪ್ರತಿಯನ್ನು ಲಗ್ತೀಕರಿಸಬೇಕು.

ದಿನಾಂಕ : 01–06–2017 **– ಶ್ರೀ ಕರುಣ್‌ರಾವ್ ಬೆಳ್ಳೆ, (ಕಾರ್ಯದರ್ಶಿ)**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ


**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಸಾಧಕರಿಗೆ ಅಭಿನಂದನೆಗಳು



### ಪಿ. ಶರಣ್ಯ ರಾವ್

ಇವರು 2016–17ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ 591 (94.56%) ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಶ್ರೀ ರಾಜರಾಜೇಶ್ವರಿ ಸರಕಾರಿ ಪ್ರೌಢಶಾಲೆ (ಕನ್ನಡ ಮಾಧ್ಯಮ) ಪೊಳಲಿ ಇಲ್ಲಿಯ ವಿದ್ಯಾರ್ಥಿನಿ. ಇವರು ಭರತನಾಟ್ಯದಲ್ಲಿ ಜ್ಯೂನಿಯರ್ ವಿಭಾಗದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಸೀನಿಯರ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾರೆ. ಇವರು ಜಯಶ್ರೀ–ಬಾಲಕೃಷ್ಣ ರಾವ್ ಪೊಳಲಿ ಇವರ ಪುತ್ರಿ. ಯಕ್ಷಗಾನವನ್ನೂ ಕಲಿಯುತ್ತಿದ್ದಾರೆ.



### ಮಾಸ್ಟರ್ ಅಮೃತ್

ಇವರು ಧರ್ಮಸ್ಥಳದ ದಿ| ಶ್ರೀನಿವಾಸ ದೇಲಂಪಾಡಿತ್ತಾಯರ ಮೊಮ್ಮಗ. ಉಜಿರೆಯ ಉದ್ಯಮಿ, ದಿಶಾ ಫುಡ್ ಕಾರ್ನರ್‌ನ ಮಾಲಿಕ ಅರುಣ ಕುಮಾರ್ ಎಂ.ಎಸ್ ಮತ್ತು ಶ್ರೀಮತಿ ಹೇಮಲತಾ ಅವರ ದ್ವಿತೀಯ ಪುತ್ರ. ಇವರು ಈ ವರ್ಷದ ಸಿ.ಬಿ.ಎಸ್.ಇ.ಯ ಹತ್ತನೇ ತರಗತಿಯ ಪರೀಕ್ಷೆಯಲ್ಲಿ 10/10 ಸಿ.ಜಿ.ಪಿ.ಎ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಎಲ್ಲೂರು ವಿನೀತ್ ರಾವ್

ಇವರು 2016–17ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 99.36% ಅಂಕಗಳೊಂದಿಗೆ ವಿಶಿಷ್ಠ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಎಲ್ಲೂರು ರಾಕೇಶ್ ರಾವ್ ಮತ್ತು ಶ್ವೇತಾ ರಾವ್ (ವಿನೀತ್ ಮೆಡಿಕಲ್ಸ್ ಪಡುಬಿದ್ರಿ)ರವರ ಪುತ್ರನಾಗಿರುವ ಇವರು ಮುದರಂಗಡಿ ಸ್ಯೆಂಟ್ ಫ್ರಾನ್ಸಿಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾರೆ.



### ಸನತ್ ರಾವ್

ಚಿತ್ರಾಪುರದ ಸಿ.ಪ್ರಕಾಶ್ ರಾವ್ ಹಾಗೂ ಶ್ರೀಮತಿ ಭುವನೇಶ್ವರಿ ದಂಪತಿಗಳ ಪುತ್ರನಾದ ಸನತ್ ರಾವ್ 2016–17ನೇ ಸಾಲಿನಲ್ಲಿ ನಡೆದ ಪಿಯುಸಿ ಪರೀಕ್ಷೆಯಲ್ಲಿ 90.33% ಅಂಕ ಪಡೆದಿರುತ್ತಾರೆ. ಇವರು ಕಟೀಲು ಶ್ರೀ ದುರ್ಗಾಪರಮೇಶ್ವರಿ ಪಿ.ಯು.ಕಾಲೇಜಿನ ವಿದ್ಯಾರ್ಥಿ.



### ಬೆಳ್ಮಣ್ ಸುದೇಷ್ಣಾ ರಾವ್

ಇವರು 2016–17ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 10/10 ಗ್ರೇಡ್‌ನೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಬೆಳ್ಮಣ್ ಡಾ| ಬಾಲಕೃಷ್ಣ ರಾವ್ (M.O, Govt Hospital Padubidri) ಮತ್ತು ಶ್ರೀಮತಿ ಸುನೀತಾ ರಾವ್‌ರವರ ಪುತ್ರಿಯಾಗಿರುವ ಇವರು ಲಕ್ಷ್ಮೀ ಜನಾರ್ಧನ ಇಂಟರ್‌ನ್ಯಾಶನಲ್ ಶಾಲೆ ಬೆಳ್ಮಣ್‌ನಲ್ಲಿ ವ್ಯಾಸಂಗ ಮಾಡಿರುತ್ತಾರೆ.



### ಕೌಶಿಕ್ ಎ.ಕೆ.

ದಿ| ಎಲ್ಲಂಗಳ ಕೃಷ್ಣ ಶ್ಯಾನುಭೋಗರ ಪುತ್ರ ಕೌಶಿಕ್ ಎ.ಕೆ. 2016–17ನೇ ಸಾಲಿನ ದ್ವಿತೀಯ ಪರೀಕ್ಷೆ(ಸಿಬಿಎಸ್‌ಸಿ)ಯಲ್ಲಿ ವಾಣಿಜ್ಯ ವಿಭಾಗದಲ್ಲಿ 93% ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರು ಬೆಂಗಳೂರಿನ ಮಲ್ಲೇಶ್ವರಂನ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ಪ್ರಸ್ತುತ ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಬಿ.ಕಾಂ ಓದುತ್ತಿದ್ದಾರೆ.



### ಕುಮಾರಿ ಮಾನಸ

ಕುಕ್ಕಿಕಟ್ಟೆಯ ಡಾ| ವೈ. ಸುದರ್ಶನರಾವ್ ಹಾಗೂ ಡಾ| ವಿದ್ಯಾರವರ ಪುತ್ರಿ ಕುಮಾರಿ ಮಾನಸ ಸಿ.ಬಿ.ಎಸ್.ಸಿ ಬೋರ್ಡ್‌ನವರ ಪಿ.ಯು.ಸಿ ಪರೀಕ್ಷೆಯಲ್ಲಿ 94% ಹಾಗೂ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ 224 ರಾಂಕ್ ಗಳಿಸಿದ್ದಾರೆ.



### ಶಶಾಂಕ್

ಇವರು ಕುಕ್ಕುಂದೂರಿನ ಜ್ಞಾನಸುಧಾ ಕಾಲೇಜಿನ ವಿದ್ಯಾರ್ಥಿ. ನಂದಳಿಕೆ ಶ್ರೀ ಉದಯಚಂದ್ರರಾವ್ ಹಾಗೂ ಶ್ರೀಮತಿ ಸುಕನ್ಯಾ ದಂಪತಿಗಳ ಪುತ್ರ. ಇವರು 2016–17ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ 95% ಅಂಕ ಗಳಿಸಿದ್ದಾರೆ.



### ಸನತ್ ಕುಮಾರ್

ಇವರು 2016–17ನೇ ಸಾಲಿನಲ್ಲಿ ನಡೆದ ಪಿಯುಸಿ ಪರೀಕ್ಷೆಯಲ್ಲಿ 539 (90%) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ ರಾಗಿರುತ್ತಾರೆ. ಇವರು ದುರ್ಗಾಪರಮೇಶ್ವರಿ ಪಿ.ಯು.ಕಾಲೇಜಿನ ವಿದ್ಯಾರ್ಥಿ ಹಾಗೂ ಅಂಚೆ ಇಲಾಖೆಯ ಉದ್ಯೋಗಿಗಳಾದ ಚಿತ್ರಾಪುರ ಶ್ರೀ ಚಂದ್ರಶೇಖರ್ ಹಾಗೂ ಶ್ರೀಮತಿ ಜಯಲಕ್ಷ್ಮೀ ದಂಪತಿಗಳ ಪುತ್ರ.

## ಶುಭ ವಿವಾಹ

ಬೈಲಕೆರೆ ಶ್ರೀಮತಿ ಮತ್ತು ಶ್ರೀ ವೆಂಕಟ್ರಾಯ ರಾವ್ ಇವರ ಪುತ್ರಿ **ಅಪೂರ್ವ** ಹಾಗೂ ಕೊಮ್ಮೆ ಶ್ರೀಮತಿ ಮತ್ತು ಶ್ರೀ ಪದ್ಮನಾಭ ಭಟ್ ಇವರ ಪುತ್ರ **ಈಶ್ವರ ಭಟ್** ಇವರ ವಿವಾಹವು ಆರ್.ಎಸ್.ಬಿ ಸಭಾಭವನ ಮಣಿಪಾಲದಲ್ಲಿ ತಾ.10–05–2017ರಂದು ನೆರವೇರಿತು

★★★★ ★★★★

ತಂತ್ರಾಡಿ ಶ್ರೀ ರಾಘವೇಂದ್ರ ಶ್ಯಾನುಭಾಗ್ ಹಾಗೂ ವಿಜಯಲಕ್ಷ್ಮಿ ರವರ ಪುತ್ರಿ **ರಕ್ಷಿತಾ** ಹಾಗು ಶ್ರೀ ಸರ್ವೋತ್ತಮ ಹಾಗೂ ಶ್ರೀಮತಿ ಪ್ರೇಮಲತಾರವರ ಪುತ್ರ **ವಿಘ್ನೇಶರ** ವಿವಾಹವು ತಾ.08–06–2017ರಂದು ಶ್ರೀ ಶಾರದಾ ಮಂಟಪದಲ್ಲಿ ನೆರವೆರಿತು.

★★★★ ★★★★

ಅಕ್ಕಲ್ ಕೋಟ್ ಶ್ರೀ ರವಿ ಶ್ಯಾನುಭಾಗ್ ಹಾಗೂ ಶ್ರೀಮತಿ ಅನ್ನಪೂರ್ಣರವರ ಪುತ್ರ **ಮಯೂರ್** ಹಾಗೂ ಶ್ರೀ ಗಣೇಶ ರಾವ್ ಹಾಗೂ ವಿಜಯಲಕ್ಷ್ಮೀ ರವರ ಪುತ್ರಿ **ಚೈತನ್ಯಾ** ರವರ ವಿವಾಹವು ತಾ.08–06–2017ರಂದು ಪಡುಬಿದ್ರೆ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದಲ್ಲಿ ನೆರವೇರಿತು

★★★★ ★★★★

ಶ್ರೀ ಕರಂಬಳ್ಳಿ ಮೋಹನರಾವ್ ಹಾಗೂ ಶ್ರೀವಿದ್ಯಾರವರ ಪುತ್ರಿ **ಶ್ವೇತಾ** ಹಾಗೂ ಶ್ರೀ ಎಲ್ಲೂರು ಸುಬ್ರಹ್ಮಣ್ಯ ರಾವ್ ಹಾಗೂ ಶಶಿಕಲಾರವರ ಪುತ್ರ **ನವೀನ್ ರಾಜ್** ಇವರ ವಿವಾಹವು ತಾ.08–06–2017ರಂದು ಉಡುಪಿಯ ಜಯಕೃಷ್ಣ ಸಭಾಭವನದಲ್ಲಿ ನೆರವೇರಿತು

★★★★ ★★★★

ಪಡುಬಿದ್ರೆ ಶ್ರೀಮತಿ ಪ್ರಸನ್ನ ಹಾಗೂ ಶ್ರೀ ಲಕ್ಷ್ಮೀಶ ರಾವ್ ಇವರ ಪುತ್ರಿ **ದಿವ್ಯಾ** ಹಾಗೂ ಶ್ರೀಮತಿ ಸುನಂದ ಹಾಗೂ ಶ್ರೀ ಎ.ಎನ್.ಕೃಷ್ಣಕುಮಾರ್ ಇವರ ಪುತ್ರ **ಅವನೀಶ್** ಇವರ ವಿವಾಹವು ತಾ. 18–06–2017ರಂದು ಮುಂಬಯಿ ನೆರುಲ್‌ನ ಆಶ್ರಯ ಹಾಲ್‌ನಲ್ಲಿ ನೆರವೇರಿತು

★★★★ ★★★★

ಉಡುಪಿಯಲ್ಲಿರುವ ಕಟೀಲು ಸಿತ್ಲ ಶ್ರೀ ಭಾಸ್ಕರ ರಾವ್ ಮತ್ತು ಶ್ರೀಮತಿ ಜಯಂತಿ ಇವರ ಪುತ್ರ **ಮಂಜುನಾಥ** ಹಾಗೂ ಕಡಬ ಹಳೆಕೋಡಿಬೈಲಿನ ಶ್ರೀ ಸತ್ಯಪ್ರಸಾದ್ ಭಟ್ ಮತ್ತು ಶ್ರೀಮತಿ ಪಾರ್ವತಿರವರ ಪುತ್ರಿ **ಶ್ವೇತಾ** ಇವರ ವಿವಾಹವು ತಾ.19–06–2017ರಂದು ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲಾಭವನ ಬೆಳ್ತಂಗಡಿಯಲ್ಲಿ ನೆರವೇರಿತು..

## ಉಪನಯನ

### ಚಿ| ವರುಣ್

ಕೊಳ್ಳೇಗಾಲ ದಿ| ಇನ್ನಾ ಶ್ರೀನಿವಾಸ ರಾವ್ ಮತ್ತು ದಿ| ಸುಲೋಚನಾರವರ ಮೊಮ್ಮಗ ಹಾಗೂ ಶ್ರೀ ಮಹೇಂದ್ರ ಬಾಬು ಮತ್ತು ಶ್ರೀಮತಿ ದೀಪಾರವರ ಪುತ್ರ ಚಿ| ವರುಣ್‌ನ ಬ್ರಹ್ಮೋಪದೇಶವು ತಾ.01–05–2017ರಂದು ಎರ್ಮಾಳಿನ ರಾಜರಾಜೇಶ್ವರಿ ಸಭಾಭವನದಲ್ಲಿ ನೆರವೇರಿತು.

### ಚಿ| ಸೋಹಂ

ಅಮೇರಿಕಾದಲ್ಲಿ ವಾಸವಾಗಿರುವ ಶ್ರೀ ಸುಧೀರ್ ಹಾಗೂ ಶ್ರೀಮತಿ ಸುಮಾ ದಂಪತಿಗಳು ತಮ್ಮ ಪುತ್ರ ಸೋಹಂನ ಬಹ್ಮೋಪದೇಶವನ್ನು ತಾ 18–06–2017 ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.

### ಚಿ| ಪ್ರತೀಕ್ ರಾವ್

ಶಂಕರಪುರದ ಕೀರ್ತಿಶೇಷ ಹರಿಶ್ಚಂದ್ರ ರಾವ್ ರವರ ಪೌತ್ರ, ಶ್ರೀ ಪ್ರಶಾಂತ್ ರಾವ್ ಮತ್ತು ಶ್ರೀಮತಿ ಪ್ರತಿಭಾ ಇವರ ಪುತ್ರ ಚಿ| ಪ್ರತೀಕ್ ರಾವ್‌ನ ಬ್ರಹ್ಮೋಪದೇಶ ಸಮಾರಂಭವು ದಿ.18–06–2017ರಂದು ಬೆಂಗಳೂರಿನ, ಮೆಸೂರು ರಸ್ತೆಯ ಚಿರಾಗ್ ರೆಸಿಡೆನ್ಸಿಯ ಕಮ್ಯೂನಿಟಿ ಹಾಲ್‌ನಲ್ಲಿ ನೆರವೇರಿತು.

### ಚಿ| ಕೀರ್ತನ್

ಕೀರ್ತಿಶೇಷ ಶ್ರೀ ಅಣ್ಣಾ ರಾವ್ ಮತ್ತು ಶ್ರೀಮತಿ ಸುಲೋಚನಾರವರ ಮೊಮ್ಮಗ ಹಾಗೂ ಶ್ರೀಮತಿ ಚೈತನ್ಯ ಮತ್ತು ಶ್ರೀ ರಮೇಶ್ ರಾವ್ ಇವರ ಪುತ್ರ ಚಿ| ಕೀರ್ತನ್‌ನ ಬ್ರಹ್ಮೋಪದೇಶ ಸಮಾರಂಭವು ತಾ.18–06–2017ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

### ಚಿ| ಸುಮುಖ್

ಹಿರಿಯಡ್ಕ ಆಳುಗ್ಗೇಲು ಶ್ರೀ ದಿವಾಕರ ಶಾಸ್ತ್ರಿಯವರ ಮೊಮ್ಮಗ ಹಾಗೂ ಶ್ರೀಮತಿ ವಿನಯ ಮತ್ತು ಶ್ರೀ ಶಿವಾನಂದ ಇವರ ಪುತ್ರ ಚಿ| ಸುಮುಖ್‌ನ ಬ್ರಹ್ಮೋಪದೇಶ ಸಮಾರಂಭವು ತಾ.25–06–2017ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.



## ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಶ್ರೀ ಸಿ.ಎಸ್.ರಾವ್

ನಮ್ಮ ಸಂಘದ ಮಾಜಿ ಅಧ್ಯಕ್ಷರು ಹಾಗೂ ಈಗ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸಿ.ಎಸ್.ರಾಯರು ಉಡುಪಿ ಲಯನ್ಸ್ ಕ್ಲಬ್ಬಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರು ಪ್ರಸ್ತುತ ಉಡುಪಿಯ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷರಾಗಿಯೂ ಸೇವೆಸಲ್ಲಿಸುತ್ತಿದ್ದಾರೆ.




ಎಮ್. ದೇವಾನಂದ್ ಭಟ್

Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶುಭಾಶಯಗಳೊಂದಿಗೆ

ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಮೂಡುಬೆಳ್ಳೆಯಲ್ಲಿ ಪ್ರತಿಭಾ ಪುರಸ್ಕಾರ



ದಿ| ಬೆಳ್ಳೆ ಪದ್ಮಾವತಿ ವಿಠಲ್ ರಾವ್ ಮತ್ತು ದಿ| ಬೆಳ್ಳೆ ಭವಾನಿರಾವ್ ಸ್ಮರಣಾರ್ಥ ಕೊಡಲಾಗುವ ಪ್ರತಿಭಾ ಪುರಸ್ಕಾರ ವಿತರಣಾ ಕಾರ್ಯಕ್ರಮ ಮೂಡುಬೆಳ್ಳೆ ನೆಲ್ಲಿಕಟ್ಟೆಯಲ್ಲಿರುವ ಜ್ಞಾನಗಂಗಾ ಪದವಿಪೂರ್ವ ಕಾಲೇಜು ಸಭಾಂಗಣದಲ್ಲಿ ಇತ್ತೀಚಿಗೆ ನೆರವೇರಿತು. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ನಿವೃತ್ತ ನಿರ್ದೇಶಕ ಶ್ರೀ ಎಂ.ಆರ್.ವಾಸುದೇವ ಸಮಾರಂಭದ ಅಧ್ಯಕ್ಷತೆ ವಹಿಸಿ ಸ್ಥಳೀಯ ಗ್ರಾಮ ಪಂಚಾಯತ್ ವ್ಯಾಪ್ತಿಯ ಹತ್ತನೇ ತರಗತಿ ಹಾಗೂ ದ್ವಿತೀಯ ಪಿ.ಯು.ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಅಭಿನಂದಿಸಿದರು. ಬಳಿಕ ಮಾತನಾಡುತ್ತಾ ವಿದ್ಯಾರ್ಥಿಗಳು ತಮ್ಮ ಊರು, ಶಾಲೆ ಹಾಗೊ ಪರಿಸರದ ಋಣ ತೀರಿಸಬೇಕೆಂದು ಹೇಳಿದರು. ಬಹುಮಾನಗಳ ಪ್ರಾಯೋಜಕರಾದ ಶ್ರೀ ಬೆಳ್ಳೆ ರವೀಂದ್ರನಾಥ್ ರಾವ್ ಬಗ್ಗೆ ಮಾತನಾಡಿದ ಶ್ರೀ ಕರುಣ್ ಬೆಳ್ಳೆ ಕಡುಬಡತನದಲ್ಲಿಯೂ ಬೆಳೆದು ವ್ಯಾಸಂಗ ಮಾಡಿ ಉನ್ನತ ಹುದ್ದೆಗೇರಿದ ಸಾಧಕರ ಬಗ್ಗೆ ತಿಳಿಸಿದರು. ಕಾಲೇಜಿನ ಉಪನ್ಯಾಸಕ ವೃಂದದವರು ನಡೆಸಿಕೊಟ್ಟ ಅಂದಿನ ಸಮಾರಂಭದಲ್ಲಿ ಬೆಳ್ಳೆ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಅಧ್ಯಾಪಕ ಶ್ರೀ ಬೆಳ್ಳೆ ಸದಾನಂದ ರಾವ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ದಿ| ಬೆಳ್ಳೆ ಪದ್ಮಾವತಿ ವಿಠಲ್ ರಾವ್ ಮತ್ತು ದಿ| ಬೆಳ್ಳೆ ಭವಾನಿರಾವ್ ಅವರ ಸಂಸ್ಮರಣೆ ಮಾಡಿದರು. ಕಾಲೇಜು ಪ್ರಾಂಶುಪಾಲ ಶ್ರೀ ಯು.ಎಲ್.ಭಟ್ ಮತ್ತು ಮೂಡುಬೆಳ್ಳೆಯ ‘ದಾಸಕೃಪಾ’ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಶ್ರೀ ನಿರಂಜನ್ ರಾವ್ ಬೆಳ್ಳೆ ಕಾರ್ಯಕ್ರಮ ಸಂಯೋಜಕರಾಗಿ ಸಹಕರಿಸಿದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿ ವಿಜೇತರನ್ನು ಪುರಸ್ಕರಿಸಲಾಯಿತು.

## ವೃತ್ತಿಯಿಂದ ನಿವೃತ್ತಿ



ಮೂವತ್ತೆಂಟು ವರ್ಷ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸೇವೆ ಸಲ್ಲಿಸಿ ಸೀನಿಯರ್ ಸ್ಪೆಷಲ್ ಅಸಿಸ್ಟೆಂಟ್ ಹುದ್ದೆಯಿಂದ ನಿವೃತ್ತರಾದ ಶ್ರೀಮತಿ ವೀಣಾ ಜೆ.ರಾವ್‌ರವರನ್ನು ಅವರ ಸಹೋದ್ಯೋಗಿಗಳು ಹಾಗೂ ಮಿತ್ರರು ತಾ.30-06-2017ರಂದು ಸನ್ಮಾನಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೀಫ್ ಮ್ಯಾನೇಜರ್ ಶ್ರೀಮತಿ ಲಕ್ಷ್ಮಿ ಹಾಗೂ ವೀಣಾರವರ ಪತಿ ಶ್ರೀ ಬಿ.ಜಯರಾಮ ರಾವ್ ಉಪಸ್ಥಿತರಿದ್ದರು.

## ವಿದ್ಯಾ ಎಸ್.ರಾವ್‌ರವರಿಗೆ ಡಾಕ್ಟರೇಟ್



ಮಣಿಪಾಲ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೀನಿಯರ್ ಗ್ರೇಡ್ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಶ್ರೀಮತಿ ವಿದ್ಯಾ ಎಸ್.ರಾವ್ ರವರು “ರಿಲಯಬಲ್ ಅಬ್ಸರ್ವರ್ ಕಂಟ್ರೋಲರ್ ಡಿಸೈನ್ ಫಾರ್ ಟ್ವಿನ್ ರೋಟಾರ್” ಎಂಬ ವಿಷಯದ ಮೇಲೆ ಮಂಡಿಸಿದ ಪ್ರಬಂಧಕ್ಕೆ ಮಣಿಪಾಲ ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ ಪದವಿಯನ್ನು ನೀಡಿರುತ್ತದೆ. ಇವರು ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಡಾ| ವೈ.ಸುದರ್ಶನ್ ರಾವ್‌ರ ಪತ್ನಿ ಹಾಗೂ ಶ್ರೀ ಹೆಚ್.ಶಂಕರನಾರಾಯಣ ರಾವ್ ಹಾಗೂ ಶ್ರೀಮತಿ ಸುನಂದಾರವರ ಪುತ್ರಿ.



ಯಕ್ಷದೇವ ಮಿತ್ರ ಕಲಾಮಂಡಳಿ ಬೆಳುವಾಯಿಯ ಕಾರ್ಯಾಧ್ಯಕ್ಷ ಶ್ರೀ ಎಂ. ದೇವಾನಂದ ಭಟ್ ಇವರನ್ನು ಧರ್ಮಸ್ಥಳದಲ್ಲಿ ಎಸ್.ಡಿ.ಎಂ. ಎಜ್ಯುಕೇಶನಲ್ ಟ್ರಸ್ಟ್ ಇದರ ಕಾರ್ಯದರ್ಶಿ ಶ್ರೀ ಬಿ. ಯಶೋವರ್ಮ ಇವರು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಿದರು.

## ಸಾವಿತ್ರಿ ಟೀಚರ್‌ಗೆ ಸಾಲು ಸಾಲು ಸನ್ಮಾನ



ಹೌದು. ಸಾಲು ಮರದ ತಿಮ್ಮಕ್ಕನಿಗೆ ಸಾಲು ಸಾಲು ಸನ್ಮಾನ ದೊರೆತಂತೆಯೇ ಕಾರ್ಕಳ ಮನೋಹರರಾಯರ ಪತ್ನಿ ಸಾವಿತ್ರಿ ಟೀಚರ್‌ಗೆ ಈ ವರ್ಷ ಸಾಲು ಸಾಲು ಸನ್ಮಾನ ದೊರೆತಿವೆ. ಉಡುಪಿಯ ಅಂಬಲ್ಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದಲ್ಲಿ ರಾಷ್ಟ್ರೀಯ ಪ್ರತಿಭೋತ್ಸವದಲ್ಲಿ ಪ್ರತಿಭಾಸಂಪನ್ನತೆಗಾಗಿ ರಾಷ್ಟ್ರೀಯ ಪ್ರತಿಭೋತ್ಸವ ಗೌರವ ಪ್ರಶಸ್ತಿ ದೊರೆತರೆ, ಗೋವಾದಲ್ಲಿ ಬಿಚ್ಚೋಲಿಯ ಕರ್ಮಭೂಮಿ ಕನ್ನಡ ಸಂಘ, ಕನ್ನಡಿಗರ 9ನೇ ಸಾಂಸ್ಕೃತಿಕ ಸಮ್ಮೇಳನದಲ್ಲಿ “ಕರುನಾಡ ಪದ್ಮಶ್ರೀ ಪುರಸ್ಕಾರ ಪ್ರಶಸ್ತಿ” ನೀಡಿ ಗೌರವಿಸಿತು. ಇತ್ತೀಚೆಗೆ ಜೂನ್ 11ರಂದು ಮಂತ್ರಾಲಯ ಶ್ರೀ ರಾಘವೇಂದ್ರ ಮಠದಲ್ಲಿ ನಡೆದ ಶ್ರೀ ರಾಘವೇಂದ್ರ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಮಂತ್ರಾಲಯ ಪೀಠಾಧಿಪತಿ ಶ್ರೀ ಸುಭುದೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಶ್ರೀ ರಾಘವೇಂದ್ರ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**(ವರದಿ : ಶ್ರೀಮತಿ ಕೃತಿ ಹೊಸನಗರ, ಕಾರ್ಕಳ)**

## ಶ್ರೀ ಶೃಂಗೇರಿ ಮಠದ ಮುದ್ರಾಧಿಕಾರಿಯಾಗಿ ನೇಮಕ



ಮುಂಬಯಿಯಲ್ಲಿರುವ ಮಠದಬೆಟ್ಟು ಶ್ರೀ ಯಂ.ಸುಭಾಷ್ಚಂದ್ರ ಇವರನ್ನು ಇತ್ತೀಚೆಗೆ ಶ್ರೀ ಶೃಂಗೇರಿ ಮಠದ ಮುದ್ರಾಧಿಕಾರಿಯನ್ನಾಗಿ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ನೇಮಕ ಮಾಡಿರುತ್ತಾರೆ.

ಶ್ರೀಯುತರು ಕಳೆದ ಹಲವು ವರ್ಷಗಳಿಂದ ಮುಂಬೈಯಲ್ಲಿ ಉದ್ಯೋಗದಲ್ಲಿದ್ದು ಸದ್ಯ ನಿವೃತ್ತಿ ಹೊಂದಿದ್ದಾರೆ. ಈ ಹಿಂದೆ ಮುಂಬಯಿಯಲ್ಲಿರುವ ನಮ್ಮ ಸುಬ್ರಹ್ಮಣ್ಯ ಸ್ಥಾನಿಕ ಸಂಘದ ಮಾಜಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಒಬ್ಬ ಸಹೋದರ ನಮ್ಮ ಸಮಾಜದ ಪ್ರತಿಷ್ಠಿತ ದೇವಾಲಯಗಳಲ್ಲೊಂದಾದ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಮುಗಿಸಿ, ಅತ್ಯಂತ ಯಶಸ್ವಿಯಾಗಿ ಬ್ರಹ್ಮ ಕಲಶೋತ್ಸವದ ಕಾರ್ಯಕ್ಕೆ ಕಾರಣಕರ್ತರಾದ ಶ್ರೀ ಯಂ. ನಾಗೇಶ ಶರ್ಮ. ಇವರು ಕೂಡಾ ಶ್ರೀ ಶೃಂಗೇರಿ ಮಠದ ಮುದ್ರಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ಇವರುಗಳ ತೀರ್ಥರೂಪರಾದ ದಿ| ಭಾರತೀ ಶರ್ಮರು ಕೂಡಾ ಹಲವು ವರ್ಷಗಳ ಕಾಲ ಶ್ರೀ ಮಠದ ಮುದ್ರಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS




ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.
ವೇದಮೂರ್ತಿ ಚಿದಾನಂದ ಭಟ್
#1437, 5ನೇ ಮುಖ್ಯ ರಸ್ತೆ, 2ನೇ ”ಡಿ” ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್- 9886629697, 9986119865

SAMPATH KUMAR
Mobile : 9741508881
8884873233
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

## ಘನಪುರೀ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ, ಶ್ರೀ ಕಾಮಾಕ್ಷೀ ಶಾರದಾದೇವಿಯರ ಸನ್ನಿಧಿ ಹೆಬ್ಬೂರು

ತುಮಕೂರು ಜಿಲ್ಲೆ-572120, ಫೋನ್: 0816 2241032

### ಚಾತುರ್ಮಾಸ್ಯ ಹಾಗು ಋಕ್ಸಂಹಿತಾಯಾಗ ಆಹ್ವಾನ ಪತ್ರಿಕಾ

**ಜುಲೈ 09 ಭಾನುವಾರ 2017ರಿಂದ**
**ಸಪ್ಟಂಬರ್ 06 ಬುಧವಾರ 2017 ರವರೆಗೆ ವಿವಿಧ ಕಾರ್ಯಕ್ರಮಗಳು**

ತಾ.09-07-2017, ಭಾನುವಾರ ವ್ಯಾಸಪೂಜಾ/ಚಾತುರ್ಮಾಸ್ಯ ಸಂಕಲ್ಪ
ತಾ.10-07-2017, ಸೋಮವಾರ ಉತ್ತರಪೂಜಾ ವ್ಯಾಸಾಕ್ಷತೆ
ತಾ.06-09-2017, ಬುಧವಾರ ಚಾತುರ್ಮಾಸ್ಯ ಸಮಾಪ್ತಿ

ಆತ್ಮೀಯ ಸದ್ಭಕ್ತರೇ,

ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರು ಶ್ರೀ ಹೇವಿಳಂಬಿ ಸಂವತ್ಸರದ ಚಾತುರ್ಮಾಸ್ಯ ವ್ರತವನ್ನು ಭಕ್ತ-ಶಿಷ್ಯ ಜನರ ಅಪೇಕ್ಷೆಯಮೇರೆಗೆ ಶ್ರೀ ಘನಪುರೀ ಸಂಸ್ಥಾನ ಕೋದಂಡಾಶ್ರಮ ಮಠ, ಹೆಬ್ಬೂರು, ತುಮಕೂರು ತಾಲೂಕು ಇಲ್ಲಿ ಆಚರಿಸಲು ಸಂಕಲ್ಪಿಸಿರುತ್ತಾರೆ. ತಾವೆಲ್ಲರೂ ಕುಟುಂಬ ಸಮೇತರಾಗಿ ಹಾಗೂ ಬಂಧು ಮಿತ್ರರೊಂದಿಗೆ ಈ ಸಂದರ್ಭದಲ್ಲಿ ಭಾಗವಹಿಸಿ, ಶ್ರೀ ಕಾಮಾಕ್ಷೀ ಶಾರದಾಂಬಾ ಕೃಪೆಗೂ ಹಾಗು ಶ್ರೀ ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಕೋರುತ್ತೇವೆ. ಸಮಾಜಬಾಂಧವರು, ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಬೇಕೆಂದು ವಿಜ್ಞಾಪನೆ.

-ವಿಶ್ವಸ್ತ ಮಂಡಳಿ ಶ್ರೀ ಮಠ, ಹೆಬ್ಬೂರು

### ದಿನಾಂಕ 16-07-2017ರಿಂದ 23-7-2017ರ ಪರ್ಯಂತ ಋಕ್ಸಂಹಿತಾ ಯಾಗ

ಶ್ರೀ ಮಠದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಲೋಕಕಲ್ಯಾಣಾರ್ಥ ಋಕ್(ಶಾಕಲ ಶಾಖೆ) ಸಂಹಿತಾ ಯಾಗ ನೆರವೇರಲಿದೆ. .ದಿನಾಂಕ 16-07-2017 ರಂದು ಋಕ್ಸಂಹಿತಾಯಾಗ ಆರಂಭಗೊಂಡು 23-7-2017ರಂದು ಪೂರ್ಣಾಹುತಿ ಇರುತ್ತದೆ. ಈ ಮಂಗಳ ಮಹೋತ್ಸವಕ್ಕೆ ತಾವು ಸಕುಟುಂಬರಾಗಿ ಆಗಮಿಸಿ ವೇದನಾರಾಯಣನ ಮತ್ತು ಶ್ರೀ ಕಾಮಾಕ್ಷೀ ಶಾರದಾಂಬೆಯ ಶ್ರೀಮುಡಿ ಪ್ರಸಾದವನ್ನು ಸ್ವೀಕರಿಸಿ ಮಹಾಸ್ವಾಮಿಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ವಿಶ್ವಸ್ತ ಮಂಡಳಿ ಶ್ರೀ ಮಠ, ಹೆಬ್ಬೂರು

### ಲಭ್ಯವಿರುವ ಸೇವೆಗಳು

| ಶ್ರೀ ಕಾಮಾಕ್ಷೀ ಶಾರದಾದೇವಿಯರ ಸನ್ನಿಧಿಯಲಿ | | ಶ್ರೀ ಗುರು ಸನ್ನಿಧಿಯಲಿ | |
|---|---|---|---|
| 1. ಪಂಚಾಮೃತ ಅಭಿಷೇಕ | ರೂ.101/- | ಶ್ರೀ ಗುರು ಪಾದಪೂಜೆ | ರೂ.501/- |
| 2. ಶ್ರೀ ಚಕ್ರಕ್ಕೆ ಅಭಿಷೇಕ | ರೂ.101/- | ಶ್ರೀ ಗುರು ಭಿಕ್ಷೆ | ರೂ.501/- |
| 3. ಸಂವಾಸಿನೀ/ಕನ್ನಿಕಾ ಪೂಜೆ | ರೂ.251/- | | |
| 4. "ಅನ್ನಪೂರ್ಣಾ ನಿಧಿ" | ರೂ.1001/- | | |

ಹೆಚ್ಚಿನ ಮಾಹಿತಿಗಾಗಿ : ಶ್ರೀ ಕೋದಂಡಾಶ್ರಮ ಮಠದ ಕಚೇರಿ ಅಥವಾ ಮಠದ ಬೆಂಗಳೂರಿನ ಪ್ರತಿನಿಧಿ ಲಕ್ಷ್ಮೀಕಾಂತ್ ಅವರನ್ನು ಮೊಬೈಲ್ : 9448077821, ಇಮೈಲ್: bsliae@gmail.com ಮೂಲಕ ಸಂಪರ್ಕಿಸಬಹುದು



## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.11-08-2017 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.04-08-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.27-07-2017 ಮತ್ತು ತಾ.12-08-2017 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com


# ಯಕ್ಷಗೊಂಬೆಗಳ ಕಲಾವಿದ ರವಿರಾಜ್ ರಾವ್



ವಿಶ್ವ ರಂಗಭೂಮಿಯಲ್ಲೇ ಒಂದು ಪರಿಪೂರ್ಣ ಮತ್ತು ಅದ್ಭುತವಾದ ಕಲೆ ಎಂದು ಗುರುತಿಸಲ್ಪಟ್ಟಿರುವುದು ನಮ್ಮ ಕರಾವಳಿ ಜಿಲ್ಲೆಯ ಯಕ್ಷಗಾನ ಕಲೆ. ಇದರ ಆಕರ್ಷಣೆ ಇರುವುದೇ ಕಣ್ಮನ ಸೆಳೆಯುವ ವೇಷಭೂಷಣಗಳಲ್ಲಿ. ಇದರಲ್ಲಿ ಸಾಧನೆಗೈದು ಖ್ಯಾತರಾದವರನ್ನು, ಸಾಧನೆಗೈಯುತ್ತಿರುವವರನ್ನು ನಾವು ನಿತ್ಯವೂ ಪತ್ರಿಕೆಗಳಲ್ಲಿ ಕಾಣುತ್ತಿರುತ್ತೇವೆ. ಆದರೆ ನಾನಿಲ್ಲಿ ಹೇಳ ಹೊರಟಿರುವುದು ಹಠಸಾಧಕ, ಯಕ್ಷಗೊಂಬೆಗಳ ತಯಾರಿ ಮಾಡುವ ಕಲಾವಿದ ರವಿರಾಜ್ ರಾವ್ ಹಳೆಯಂಗಡಿಯವರ ಬಗ್ಗೆ. ಮನೆ ಮಂದಿಯೊಂದಿಗೆ ಎಳವೆಯಲ್ಲೇ ಯಕ್ಷಗಾನವನ್ನು ಬಹಳ ಆಸಕ್ತಿಯಿಂದ ವೀಕ್ಷಿಸುತ್ತಾ ಬೆಳೆದ ರವಿರಾಜನಿಗೆ ವೇಷಭೂಷಣಗಳ ಒಟ್ಟಂದ ಮನದ ಮೂಲೆಯಲ್ಲಿ ಮನೆ ಮಾಡಿ ಕಾಡುತ್ತಿತ್ತು. ಮುಂದೆ ಯಕ್ಷಗಾನ ಕಿರೀಟಗಳ ಮಾದರಿಯ ಸ್ಮರಣಿಕೆಗಳ ಬಗ್ಗೆ ಆಸಕ್ತಿ ತಳೆದು, ಖ್ಯಾತ ಯಕ್ಷಗಾನ ಕಲಾವಿದರಾಗಿಯೂ ಸ್ಮರಣಿಕೆಗಳ ತಯಾರಿ ಮಾಡುತ್ತಿದ್ದ ಆಡೂರು ಶ್ರೀಧರರಾಯರ ಶಿಷ್ಯನಾಗಿ ಸೇರಿ ಸ್ಮರಣಿಕೆಗಳ ತಯಾರಿಯನ್ನು ಕರಗತ ಮಾಡಿಕೊಂಡರು. ಇಂದು ತಂದೆ, ತಾಯಿ, ಬಂಧುಗಳ ಮತ್ತು ಊರಗೆಳೆಯರ ಸಹಕಾರದಿಂದ ಮನೆಯಲ್ಲೇ ಸ್ಮರಣಿಕೆಗಳನ್ನು ತಯಾರಿಸುತ್ತಾ ಅದರಲ್ಲಿ ಹೊಸತನವನ್ನೂ, ತನ್ನತನವನ್ನೂ ಅಳವಡಿಸುತ್ತಾ ಬೆಳೆದರು. ಅದರಲ್ಲೂ ಬಹಳ ಅಧ್ಯಯನ ಪೂರ್ವಕವಾಗಿ ವೇಷಭೂಷಣಗಳ ಮೂಲರೂಪ ಮತ್ತು ಆಶಯಕ್ಕೆ ಧಕ್ಕೆ ಬಾರದಂತೆ ಎಚ್ಚರ ವಹಿಸುತ್ತಾ ಫೈಬರ್ ಗೊಂಬೆಗಳ ತಯಾರಿಯಲ್ಲಿ ತೊಡಗಿಕೊಂಡರು. ವಿಶೇಷವಾಗಿ ಈ ಪುಟ್ಟ ಗೊಂಬೆಗಳಲ್ಲಿನ ಪ್ರಮಾಣಬದ್ಧತೆ, ಸುಂದರ ಮುಖಭಾವ, ಆಭರಣಗಳ ಸೂಕ್ಷ್ಮ ವಿಷಯಗಳನ್ನು ಅದರಲ್ಲಿ ತೋರ್ಪಡಿಸಿರುವುದು ಮೆಚ್ಚುಗೆಯ ಅಂಶವಾಗಿದೆ. ಹಾಗೆಯೇ ತೆಂಕುತಿಟ್ಟಿನ ಶಿರೋಭೂಷಣಗಳನ್ನು ಫೈಬರ್‌ನಲ್ಲಿ ತಯಾರಿಸಿ (ಧರಿಸಲು ಬಹಳ ಹಗುರ ಮತ್ತು ಬಾಳಿಕೆ ದೀರ್ಘಕಾಲ) ಜಿಲ್ಲೆಯಲ್ಲೇ ಪ್ರಥಮವಾಗಿ ಪರಿಚಯಿಸುತ್ತಿದ್ದಾರೆ.

ಅದಲ್ಲದೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಮೊದಲೆಂಬಂತೆ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಈ ಬಾರಿಯ ಉತ್ಸವದಲ್ಲಿ ರಥಕ್ಕೆ ಸುತ್ತಲೂ ಆಳೆತ್ತರದ ಪ್ರಮಾಣಬದ್ಧ, ಸುಂದರ ಯಕ್ಷಗಾನದ ಗೊಂಬೆಗಳನ್ನು ಇಪ್ಪತ್ತೆರಡು ಜನ ಸಹಕಲಾವಿದರ ಜೊತೆಗೂಡಿ ಫೈಬರ್‌ನಲ್ಲಿ ತಿಂಗಳೊಳಗೆ ತಯಾರಿಸಿ ಅಳವಡಿಸಿದ್ದು ಭಕ್ತಜನರ, ಯಕ್ಷಪ್ರೇಮಿಗಳ ಹುಬ್ಬೇರಿಸುವಂತೆ ಮಾಡಿದೆ. ತನ್ನ ಸಂಸ್ಥೆಗೆ "ಯಕ್ಷವರ್ಣ ಕಲಾತಂಡ" ಎನ್ನುವ ಹೆಸರಿಟ್ಟು ಸಹಕಲಾವಿದರ ಉತ್ತಮ ಸಹಕಾರದೊಂದಿಗೆ ನಿರಂತರ ಕಲಾಚಟುವಟಿಕೆಯಲ್ಲಿ ತೊಡಗಿಸಿಕೊಂಡು, ನೆರೆಹೊರೆಯ ಹೆಣ್ಣುಮಕ್ಕಳಿಗೆ ಉದ್ಯೋಗದಾತನಾಗಿರುವುದು ಹಾಗೂ ತನ್ನ ನೆಲೆಯನ್ನು ಇದರಲ್ಲಿ ಕಂಡುಕೊಂಡಿದ್ದು ಇಂದಿನ ಯುವಜನತೆಗೆ ಮಾದರಿಯಾಗಿದ್ದಾರೆ. ಈ ಉದ್ಯಮದಲ್ಲಿ ಪೈರಸಿಯಂತಹ ಕಾಟಗಳಿದ್ದು ಮನಕ್ಕೆ ತುಸು ಬೇಸರವಾಗಿದ್ದರೂ ಈ ಕ್ಷೇತ್ರದಲ್ಲಿ ಇನ್ನಷ್ಟೂ ಹೊಸತನದ ಸಾಧನೆಯ ಕನಸು ಕಾಣುತ್ತಿದ್ದಾರೆ. ಇಂದಿನ ಯುವಜನಾಂಗ ಆಧುನಿಕತೆಯ ಭರಾಟೆಗೆ ಸಿಲುಕ್ಕಿದ್ದು ಮುಂದೊಂದು ದಿನ ಯಕ್ಷಗಾನ ಕಲೆ ಜನಮಾನಸದಿಂದ ಮರೆಯಾದಲ್ಲಿ, ಮುಂದಿನ ತಲೆಮಾರಿಗೆ ಈ ಗೊಂಬೆಗಳು ಮಾತ್ರ ಯಕ್ಷಲೋಕದ ಕಥೆಯನ್ನು ಹೇಳಬಹುದು. ಹಾಗಾಗಿ ರವಿಯಂತಹ ಸಾಧಕ ಕಲಾವಿದರು ಯಕ್ಷಲೋಕಕ್ಕೆ ಬಹಳ ದೊಡ್ಡ ಕೊಡುಗೆ ನೀಡುತ್ತಿದ್ದಾರೆ ಎಂದರೆ ತಪ್ಪಾಗಲಾರದು. ದಿ| ವೈ. ಉಮೇಶ್ ರಾವ್ ಮತ್ತು ಶ್ರೀಮತಿ ಮೀರಾರಾವ್ ದಂಪತಿಗಳ ಸುಪುತ್ರ ಹಾಗೂ ದಿ| ಪಂಡಿತ ಹಳೆಯಂಗಡಿ ಸುಬ್ರಾಯ ಭಟ್(ಹರಿ ಭಟ್) ಅವರ ಮೊಮ್ಮಗನಾಗಿರುವ ಈ ಸರಳ-ಸಜ್ಜನಿಕೆಯ ತರುಣನ ಸಾಧನೆಗೆ ನಾವೆಲ್ಲಾ ಶುಭ ಹಾರೈಸುವುದರೊಂದಿಗೆ ಪ್ರೋತ್ಸಾಹ, ಸಹಕಾರ ಖಂಡಿತವಾಗಿಯೂ ನೀಡಬೇಕಾಗಿದೆ.

ಸಂಪರ್ಕಕ್ಕಾಗಿ : 9632845009

-ಕೆ. ದಿನಮಣಿ ಶಾಸ್ತ್ರಿ, ಬ್ರಹ್ಮಾವರ


### ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| 16-07-2017 | ಕರ್ಕಾಟಕ ಸಂಕ್ರಮಣ ಆಟಿ ತಿಂಗಳಾರಂಭ, ದಕ್ಷಿಣಾಯನ ಆರಂಭ |
| 19-07-2017 | ಸರ್ವೈಕಾದಶಿ |
| 24-07-2017 | ಶ್ರಾವಣ ಮಾಸ, ಶುಕ್ಲಪಕ್ಷಾರಂಭ |
| 27-07-2017 | ನಾಗರ ಪಂಚಮಿ |
| 03-08-2017 | ಸರ್ವೈಕಾದಶಿ |
| 04-08-2017 | ವರಮಹಾಲಕ್ಷ್ಮೀ ವ್ರತ |
| 07-08-2017 | ಹುಣ್ಣಿಮೆ, ರಕ್ಷಾಬಂಧನ |
| 11-08-2017 | ಸಂಕಷ್ಟಹರ ಚತುರ್ಥಿ |
| 16-08-2017 | ಸಿಂಹ ಸಂಕ್ರಮಣ ಸೋಣ ತಿಂಗಳಾರಂಭ |
| 18-08-2017 | ಸರ್ವೈಕಾದಶಿ |
| 20-08-2017 | ಶೃಂಗೇರಿ ಭೇಟಿ |


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

## ಶುಭಾಶಯಗಳು



**ಶ್ರೀಮತಿ ವೀಣಾ ಜೆ.ರಾವ್**

**38 ವರ್ಷಗಳ ಸುದೀರ್ಘ ಬ್ಯಾಂಕಿಂಗ್ ಸೇವೆಯಿಂದ ನಿವೃತ್ತರಾಗುತ್ತಿರುವ ನಿಮಗೆ ಶುಭ ಕೋರುವ**

ಶ್ರೀ ಬಿ. ಜಯರಾಮ ರಾವ್, ಒಳಕಾಡು, ಉಡುಪಿ
ಶ್ರೀ ಸೌರಭ್ ಜೆ.ರಾವ್ ಹಾಗೂ ಶ್ರೀಮತಿ ಅಪೂರ್ವ
ಶ್ರೀ ವೈ. ಮೋಹನ ರಾವ್

## ಶುಭಾಶಯಗಳು




**ಶ್ರೀ ರಂಗಯ್ಯ ಹೆಬ್ಬಾರ್**
ಮತ್ತು
**ಶ್ರೀಮತಿ ಸುಂದರಿ ಹೆಬ್ಬಾರ್**

**ದಾಂಪತ್ಯ ಜೀವನದ 60ನೆಯ ವರ್ಷಕ್ಕೆ ಶುಭ ಕೋರುವ**

ಶ್ರೀ ಗಣೇಶ್ ಹೆಬ್ಬಾರ್ ಹಾಗೂ
ಶ್ರೀಮತಿ ಆರತಿ ಹೆಬ್ಬಾರ್
ಅಂಬಲ್ಪಾಡಿ, ಉಡುಪಿ

ಕು। ಆರುಷಿ ಮತ್ತು
ಮಾ। ಯಾಜ್ಞವಲ್ಕ್ಯ

## ಕೃತಜ್ಞತೆಗಳು




**ಚಿ। ಅಭಿಷೇಕ್ ಮತ್ತು ಚಿ। ಸೌ। ಪ್ರೀತಿಕಾ**

ದಿನಾಂಕ 31–05–2017ರಂದು ಮಂಗಳೂರಿನ ಪ್ರತಾಪ ನಗರದಲ್ಲಿರುವ ಸಂಘ ನಿಕೇತನದ ಕಲ್ಯಾಣ ಮಂಟಪದಲ್ಲಿ ನಡೆದ ನನ್ನ ಪುತ್ರಿ ಚಿ। ಸೌ। ಪ್ರೀತಿಕಾ ಹಾಗೂ ಚಿ। ಅಭಿಷೇಕ್‌ರವರ ವಿವಾಹ ಮತ್ತು ತಾ.01–06–2017ರಂದು ಉಡುಪಿ ಇಂದ್ರಾಳಿಯ "ಶ್ರೀ ಪಂಚದುರ್ಗಾ ಪರಮೇಶ್ವರೀ ದೇವಸ್ಥಾನದ ಸಭಾಭವನ"ದಲ್ಲಿ ನಡೆದ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಆರತಕ್ಷತೆ ಸಮಾರಂಭಗಳಿಗೆ ಆಗಮಿಸಿ, ಸಮಾರಂಭವು ಯಶಸ್ವಿಯಾಗಲು ಸಹಕರಿಸಿದ, ನೂತನ ವಧೂ–ವರರನ್ನು ಆಶೀರ್ವದಿಸಿ ನಮ್ಮನ್ನು ಹರಸಿದ ಎಲ್ಲಾ ಬಂಧು ಬಾಂಧವರಿಗೆ, ಮಿತ್ರರಿಗೆ ಹಿತೈಷಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವ,

ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್
ಶ್ರೀಮತಿ ಸ್ವಾತಿ ಮತ್ತು ಶ್ರೀ ಪ್ರಮೋದ್ ಕುಮಾರ್
ಮಾ। ಹಾರ್ದಿಕ್ ಕುಮಾರ್
ಕೇದಿಗೆ ಮನೆಯವರು

ಶ್ರೀಮತಿ ಹೇಮ ಮತ್ತು ಶ್ರೀ ಅಲೆವೂರು ಕೃಷ್ಣರಾವ್
ಶ್ರೀ ಅಭಿಜಿತ್ ಮುಂಬಯಿ
ಮತ್ತು ಅಲೆವೂರು ಮನೆಯವರು.

## ನೂತನ ದಂಪತಿಗಳಿಗೆ ಹೃದಯ ತುಂಬಿದ ಅಭಿನಂದನೆಗಳು



**ಚಿ। ಅಜಯ್ ಮತ್ತು ಚಿ। ಸೌ। ಸೌಜನ್ಯಾ**

ಡಾ। ಶ್ರೀಮತಿ ಶೋಭಾ ಆರ್. ರಾವ್ ಮತ್ತು ಡಾ। ಚಂಡುಕಳ ರಮೇಶ್ ಜಿ. ರಾವ್‌ರವರ ಸುಪುತ್ರ ಚಿ। ಅಜಯ್ ಹಾಗೂ ಶ್ರೀಮತಿ ಎನ್. ವಿಜಯಲಕ್ಷ್ಮೀ ಬಿ. ರಾವ್ ಮತ್ತು ನಂದಳಿಕೆ ಬಾಲಚಂದ್ರ ರಾವ್ ಅವರ ಸುಪುತ್ರಿ ಚಿ। ಸೌ। ಸೌಜನ್ಯಾ ಅವರೊಂದಿಗೆ ಜೂನ್ 1 ರಂದು ಮಂಗಳೂರು ಸಂಘನಿಕೇತನದಲ್ಲಿ ಜರಗಿದ ವಿವಾಹ ಸಂಭ್ರಮಕ್ಕೆ ಹಾಗೂ ಜೂನ್ 2 ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರುಗಿದ ಔತಣ ಕೂಟಕ್ಕೂ ಆಗಮಿಸಿದ ಎಲ್ಲಾ ಬಂಧು–ಮಿತ್ರರಿಗೂ ಹಾಗೂ ವಿಶೇಷವಾಗಿ ಮಾರ್ಗದರ್ಶನ ನೀಡಿ ಸಹಕರಿಸಿದ ಆತ್ಮೀಯರಿಗೆ ಹೃದಯ ತುಂಬಿದ ಕೃತಜ್ಞತೆಗಳು.

ಶ್ರೀಮತಿ ಡಾ। ಶೋಭಾ ಆರ್. ರಾವ್
ಮತ್ತು ಡಾ। ಚಂಡುಕಳ ರಮೇಶ ಜಿ. ರಾವ್
ಹಾಗೂ ಡಾ। ಅಶ್ವತ್ ಆರ್. ರಾವ್
ಹಾಗೂ ಚಂಡುಕಳ ಕುಟುಂಬಸ್ಥರು

ಶ್ರೀಮತಿ ಎನ್ ವಿಜಯಲಕ್ಷ್ಮೀ ಬಿ. ರಾವ್
ಮತ್ತು ನಂದಳಿಕೆ ಬಾಲಚಂದ್ರ ರಾವ್
ಹಾಗೂ ನಂದಳಿಕೆ ಮೂಡುಮನೆ ಕುಟುಂಬಸ್ಥರು

## ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆ


ದಿ। ಶಿವಶಂಕರ ರಾವ್

ಶಿವಮೊಗ್ಗದಲ್ಲಿ ವಾಸ್ತವ್ಯದಲ್ಲಿದ್ದ ದಿ। ನಂದಾವರ ಶಿವಶಂಕರ ರಾಯರ ಸವಿನೆನಪಿನಲ್ಲಿ ಅವರ ಪತ್ನಿ ಶ್ರೀಮತಿ ಲಲಿತಾ ಎಸ್.ರಾವ್ ಅವರು ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿವೇತನ ನಿಧಿಗೆ ರೂ.10,000/– ದೇಣಿಗೆ ನೀಡಿದ್ದಾರೆ.

ಶ್ರೀಮತಿ ಲಲಿತಾ ಎಸ್.ರಾವ್ ಇವರು ಅಂಬಲ್ಪಾಡಿ ಕೃಷ್ಣರಾಯರ ಸೋದರಿ. ಪುತ್ತೂರು ಕುಂಜಾರಿನ ದಿ. ರಮಾಬ್ಾ ಸೀತಾರಾಮ ರಾಯರ ಮಗಳು. ಅವರ ಈ ಸದಾಶಯದಲ್ಲಿ ಸುಹಾಸ್ ರಾವ್, ನಂದಿತಾ (ಮಗ–ಸೊಸೆ) ಹಾಗೂ ಸಹನಾ, ಚೇತನ್‌ರಾವ್ (ಮಗಳು–ಅಳಿಯ) ಸಹಭಾಗಿಗಳಾಗಿದ್ದಾರೆ.

ಇವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಹಾಗೂ ಶ್ರೀ ಶಾರದಾ ಬಳಗದ ಕೃತಜ್ಞತೆಗಳು.


*With Best Compliments from :*
**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436

**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

# ಅಮೇರಿಕದ ಫಾರ್ಮಿಂಗ್‌ಟನ್ ನಗರದಲ್ಲಿ ಶ್ರೀ ಶಂಕರ ಜಯಂತಿ




ಅಮೇರಿಕದ ಮಿಚಿಗನ್ ರಾಜ್ಯದ ಫಾರ್ಮಿಂಗ್‌ಟನ್ ನಗರದದಲ್ಲಿ ಶ್ರೀ ಶಂಕರ ಜಯಂತಿ ಕಾರ್ಯಕ್ರಮವು ಇತ್ತೀಚೆಗೆ ವಿಜ್ರಂಭಣೆಯಿಂದ ಜರಗಿತು.

ಇದೇ ಸಂದರ್ಭದಲ್ಲಿ ನಮ್ಮವರೇ ಆದ ಶ್ರೀಮತಿ ಮಾರ್ಪಳ್ಳಿ ರಮಾವಾಣಿ ಹರೀಶ್ ರಾವ್ ಇವರ "ಸಂಗೀತ ಶಾಲೆ"ಯ ವಾರ್ಷಿಕೋತ್ಸವವೂ ನೆರವೇರಿತು. ಬಳಿಕ ನಡೆದ ಸಂಗೀತ ಸೇವೆಯಲ್ಲಿ ಶ್ರೀಮತಿ ಶುಂಠಿಪಾಡಿ ಶಾರದಾ ಮೋಹನ ರಾವ್ ಮತ್ತು ಶ್ರೀಮತಿ ಮಾರ್ಪಳ್ಳಿ ರಮಾವಾಣಿ ಹರೀಶ್ ರಾವ್ ಹಾಡುಗಾರಿಕೆಯನ್ನು ಮತ್ತು ಕುಮಾರಿ ಮನಸ್ವಿನಿ ರಾವ್ ವಯಲಿನ್ ಮಾಸ್ಟರ್ ಅನಿರುದ್ಧ ರಾವ್ ತಬ್ಲವನ್ನು ನುಡಿಸಿ ನಡೆಸಿಕೊಟ್ಟರು (ಇವರು ಸಂಬಂಧದಲ್ಲಿ ಕ್ರಮವಾಗಿ ಅಜ್ಜಿ ಮಗಳು ಮತ್ತು ಮೊಮ್ಮಕ್ಕಳಾಗಿರುತ್ತಾರೆ)

ಶ್ರೀ ದೇವಸ್ಥಾನ ಅರ್ಚಕರುಗಳಾದ ಶ್ರೀ ರಮೇಶ್ ಭಟ್ ಮತ್ತು ಶ್ರೀ ಚಂದ್ರಮೌಳಿ ಶರ್ಮ, ಇವರು ಶ್ರೀ ದೇವರಿಗೆ ರುದ್ರಾಭಿಷೇಕ ಮತ್ತು ಪೂಜೆಯನ್ನು ನೆರವೇರಿಸಿದರು.

ಕೊನೆಯಲ್ಲಿ ಪ್ರಸಾದ ವಿತರಣೆಯು ಜರಗಿತು. ಕಾರ್ಯಕ್ರಮದಲ್ಲಿ ಕನ್ನಡಿಗರು ಅಲ್ಲದೆ ತೆಲುಗು ಮತ್ತು ತಮಿಳು ಭಕ್ತರು ಸುಮಾರು 15 ಜನರು ಭಾಗವಹಿಸಿದ್ದರು.

ಈ ದೇವಸ್ಥಾನದ ಕಟ್ಟಡವು ಪುರಾತನ ಚರ್ಚ್ ಆಗಿದ್ದು ಅದನ್ನು ಮಠದ ಶಿಷ್ಯ ವರ್ಗದವರು ಶ್ರೀ ಶೃಂಗೇರಿ ಮಠದ ಸಹಕಾರದೊಂದಿಗೆ ಖರೀಸಿ ದೇವಸ್ಥಾನವಾಗಿಸಿದ್ದಾರೆ.

ಅಲ್ಲದೆ ಶೀಘ್ರದಲ್ಲೇ ಹೊಸ ದೇವಸ್ಥಾನದ ನಿರ್ಮಾಣದ ಬಗ್ಗೆಯೂ ಚಿಂತನೆ ನಡೆಸಿರುತ್ತಾರೆಂದು ತಿಳಿದು ಬಂದಿದೆ

**ವರದಿ: ಸುಜಾತ ಎಮ್.ವಿ**


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)


**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-23**

# ಶ್ರೀ ಸೋಮನಾಥ ದೇವಸ್ಥಾನ ಚಿರುಗೋಳಿ, ಮಂಗಲ್ಪಾಡಿ, ಕಾಸರಗೋಡು





ಕಾಸರಗೋಡು ಜಿಲ್ಲೆಯ ಉಪ್ಪಳದ ಬಳಿ ಇರುವ ಚಿರುಗೋಳಿ ಎಂಬಲ್ಲಿರುವ ಪ್ರಾಚೀನವಾದ ದೇವಸ್ಥಾನವಿದು. ಅಲ್ಲಿ ಸುಮಾರು 600 ವರ್ಷಗಳಿಂದ ನೆಲೆಸಿರುವ ಚೆಂಡುಕಳ ಮನೆತನದ ಹಿರಿಯರು ಪ್ರತಿಷ್ಟಾಪಿಸಿದ ದೇವಸ್ಥಾನವಿದು. ದೇವಿಯು ಚೆಂಡಾಡುವ ಸ್ಥಳದಲ್ಲಿ ನೆಲೆಸಿದ್ದರಿಂದ ಈ ಮನೆತನದವರಿಗೆ ಚೆಂಡುಕಳ ಮನೆತನ ಎಂದು ಹೆಸರು ಬಂತಂತೆ. ಈ ಮನೆಯವರು ಪ್ರತಿಷ್ಟಾಪಿಸಿದ ಇನ್ನೊಂದು ದೇವಸ್ಥಾನವಾದ ಶ್ರೀ ಸದಾಶಿವ ದೇವಸ್ಥಾನವೂ ಇಲ್ಲಿದೆ. ಈ ದೇವಸ್ಥಾನವು ಗ್ರಾಮದೇವರಾಗಿ ಪೂಜಿಸಲ್ಪಡುತ್ತಿದೆ. ಆದರೆ ಶ್ರೀ ಸೋಮನಾಥ ದೇವಸ್ಥಾನವು ತುಂಬಾ ಜೀರ್ಣಾವಸ್ಥೆಗೊಳಗಾಗಿದ್ದು ಕೇವಲ ಮುರಕಲ್ಲಿನ ಗರ್ಭಗುಡಿ, ಚಪ್ಪರ ಮಾತ್ರ ಅಲ್ಲಿ ಉಳಿದಿತ್ತು. ಲಭ್ಯವಿರುವ ಮಾಹಿತಿಗಳ ಪ್ರಕಾರ ದೇವಸ್ಥಾನವು 18ನೇ ಶತಮಾನಕ್ಕೆ ಸೇರಿದ್ದೆಂದು ಊಹಿಸಬಹುದು. ಆದರೂ ಊರವರು ಇದು ಅದಕ್ಕೂ ಹಿಂದಿನ ದೇವಸ್ಥಾನವೆಂದು ಅಭಿಪ್ರಾಯಪಡುತ್ತಾರೆ.

ಊರವರು ಹಾಗೂ ಚೆಂಡುಕಳ ಮನೆತನದವರು ಈ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಂಕಲ್ಪಿಸಿ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳ ಆಶೀರ್ವಾದದ ಬಲದೊಂದಿಗೆ ಮುನ್ನಡಿಯಿಟ್ಟು ಸೋಮನಾಥ ದೇವರಿಗೆ ಸುಂದರವಾದ ಗರ್ಭಗುಡಿ, ತೀರ್ಥಮಂಟಪವನ್ನು ಕಟ್ಟಿ ಗರ್ಭಗುಡಿಯಲ್ಲಿ ಶ್ರೀ ಸೋಮನಾಥದೇವರ ಮೂಲಲಿಂಗವನ್ನೂ, ಗರ್ಭಗುಡಿಯ ಮುಂದೆ ನಂದಿಯ ವಿಗ್ರಹವನ್ನೂ ಪ್ರತಿಷ್ಟಾಪಿಸಿದ್ದಾರೆ. ಗಣಪತಿದೇವರನ್ನೂ ಪ್ರತ್ಯೇಕಗುಡಿಯಲ್ಲಿ ಪ್ರತಿಷ್ಟಾಪಿಸಲಾಗಿದೆ. ದೇವಸ್ಥಾನದ ಸುತ್ತ ಸುತ್ತುಪೌಳಿಯನ್ನು ಕಟ್ಟಲಾಗಿದೆ. ದೇವಳವು ಸುಮಾರು 60 ಸೆಂಟ್ಸ್ ವಿಸ್ತೀರ್ಣದ ವಿಶಾಲವಾದ ಸುಂದರ ಪರಿಸರದಲ್ಲಿದೆ. ಶ್ರೀ ಕರುಣ್ ರಾವ್ ಬೆಳ್ಳೆ ಇವರ ಸಂಚಾಲಕತನದಲ್ಲಿ ಈ ದೇವಳವನ್ನು ಜೀರ್ಣೋದ್ಧಾರಗೊಳಿಸಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ತಾ 19-04-2017 ರಿಂದ 24-04-2017 ರ ತನಕ ಬ್ರಹ್ಮಕಲಶೋತ್ಸವವನ್ನು ನೆರವೇರಿಸಲಾಗಿದೆ. ಡಾ। ಚೆಂಡುಕಳ ರಮೇಶರಾವ್ ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷರಾಗಿದ್ದಾರೆ . ಶ್ರೀ ದಾಮೋದರ ಉಬರಳೆ ಇದರ ಅಧ್ಯಕ್ಷರು. ಕಾರ್ಯದರ್ಶಿಗಳಾಗಿ ಶ್ರೀ ಸುಬ್ರಹ್ಮಣ್ಯ ಉಬರಳೆ ಹಾಗೂ ಶ್ರೀ ಜಗದೀಶ ಶರ್ಮರು ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ

ಉಪ್ಪಳದಿಂದ ಕಾಸರಗೋಡಿಗೆ ಹೋಗುವ ದಾರಿಯಲ್ಲಿ ನಯಾಬಜಾರ್ ಎಂಬ ಪ್ರದೇಶದಲ್ಲಿ ಬಲಕ್ಕೆ ಚಿರುಗೋಳಿಗೆ ಹೋಗುವ ರಸ್ತೆ ಸಿಗುತ್ತದೆ. ಈ ರಸ್ತೆಯಲ್ಲಿ ದೇವಸ್ಥಾನಕ್ಕೆ ಹೋಗಬಹುದು. ಹೆಚ್ಚಿನ ಮಾಹಿತಿಗಾಗಿ ಡಾ। ಚೆಂಡುಕಳ ರಮೇಶ್ ರಾವ್‌ರನ್ನು 9880406714ರಲ್ಲಿ ಸಂಪರ್ಕಿಸಬಹುದು.

**ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ**
**ನಾಗರ ಪಂಚಮಿ, ವರಮಹಾಲಕ್ಷ್ಮೀ ಹಬ್ಬ ಹಾಗೂ**
**ಸ್ವಾತಂತ್ರ್ಯೋತ್ಸವದ ಶುಭಾಶಯಗಳು**


**With Best Compliments From :**

Land™ Trades
BUILDERS & DEVELOPERS


UPGRADE TO A NEW LIFESTYLE
Premium Projects in Mangalore










9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org